Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 28-11-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 28-11-2020 |
| --- | --- |
| Page No | 3B |




ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 28-11-2020 |
| --- | --- |
| Page No | 3D |

ಪಾಲಿಕೆ ವ್ಯಾಪ್ತಿಗೆ ಸೇರಿದ ನಾಲ್ಕು ಬಡಾವಣೆಗಳು; ಸಚಿವ ಸಂಪುಟ ಒಪ್ಪಿಗೆ: 13 ವರ್ಷಗಳ ಹೋರಾಟಕ್ಕೆ ಸಿಕ್ಕ ಗೆಲುವು

# ಕಾನ್ಷಿರಾಮ್‌ನಗರ ಜನರ ಕನಸು ನನಸು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಕಾನ್ಷಿರಾಮ್‌ನಗರ, ಲಕ್ಷ್ಮೀಪುರ, ಮಲ್ಲಸಂದ್ರ ಹಾಗೂ ಉತ್ತರಹಳ್ಳಿ ಮನವರ್ತೆ ಕಾವಲ್ ಗ್ರಾಮದ ಬಡಾವಣೆಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಸ್ಥಳೀಯರ ಹಲವು ವರ್ಷಗಳ ಹೋರಾಟಕ್ಕೆ ಫಲ ಸಿಕ್ಕಿದೆ.

ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಕಾನ್ಷಿರಾಮ್ ಬಡಾವಣೆ ಮತ್ತು ಲಕ್ಷ್ಮೀಪುರ ಗ್ರಾಮದ ಜನರು 13 ವರ್ಷಗಳಿಂದ ಹೋರಾಟ ನಡೆಸಿದ್ದರು. ಪಾಲಿಕೆ ಸೇರುವ ಅವರ ಕನಸು ಸಾಕಾರಗೊಂಡಿದೆ.

ಬಿಬಿಎಂಪಿ ವ್ಯಾಪ್ತಿಗೆ 2007ರಲ್ಲಿ 7 ನಗರಸಭೆ, ಒಂದು ಪಟ್ಟಣ ಪಂಚಾಯಿತಿ ಮತ್ತು 110 ಹಳ್ಳಿಗಳು ಸೇರ್ಪಡೆಯಾದವು. ಆ ಪಟ್ಟಿಯಲ್ಲಿ ಕಾನ್ಷಿರಾಮ್ ನಗರವೂ ಇತ್ತು. ಆಸ್ತಿ ವಹಿ ಮತ್ತು ಇನ್ನಿತರ ದಾಖಲೆಗಳು ಗ್ರಾಮ ಪಂಚಾಯಿತಿಯಿಂದ ಪಾಲಿಕೆಗೆ ಹಸ್ತಾಂತರವಾಗದ ತಾಂತ್ರಿಕ ಕಾರಣಕ್ಕೆ ಸೇರ್ಪಡೆ ವಿಳಂಬವಾಯಿತು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ 2015ರ ಆಗಸ್ಟ್ 31ರಲ್ಲಿ ಈ ಬಡಾವಣೆಗಳು ಪಾಲಿಕೆಯ 11ನೇ ವಾರ್ಡ್ (ಕುವೆಂಪುನಗರ) ವ್ಯಾಪ್ತಿಗೆ ಸೇರ್ಪಡೆಗೊಂಡವು.



ಅಭಿವೃದ್ಧಿ ಕಾಣದ ಕಾನ್ಷಿರಾಮ್‌ನಗರ ಬಡಾವಣೆ ರಸ್ತೆ

ಆದರೆ, ಈ ವಿಂಗಡಣೆ ಅವೈಜ್ಞಾನಿಕವಾಗಿ ಆದ ಕಾರಣ ಹಲವು ತಾಂತ್ರಿಕ ಸಮಸ್ಯೆಗಳು ಎದುರಾದವು. ಕಾನ್ಷಿರಾಮ್‌ನಗರವು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದ್ದರೆ, 11ನೇ ವಾರ್ಡ್ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿದೆ. ದಾಸರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ 12ನೇ ವಾರ್ಡ್‌ಗೆ

**ವರದಿ ಪರಿಣಾಮ**

(ಶೆಟ್ಟಿಹಳ್ಳಿ) ಹೊಂದಿಕೊಂಡಂತೆ ಇರುವ ಈ ಬಡಾವಣೆಗಳನ್ನು 11ನೇ ವಾರ್ಡ್‌ಗೆ ಸೇರ್ಪಡೆ ಮಾಡಿದ್ದೇ ಈ ತೊಡಕುಗಳಿಗೆ ಕಾರಣವಾಯಿತು. ಈ ತೊಡಕು ನಿವಾರಣೆಯಾಗಲು ನಿವಾಸಿಗಳು ಐದು ವರ್ಷ ಕಾಯಬೇಕಾಯಿತು. ಬಿಬಿಎಂಪಿ ವ್ಯಾಪ್ತಿಗೆ ಈ ಬಡಾವಣೆಗಳನ್ನು ಸೇರಿಸಬೇಕು ಎಂದು ಆಗ್ರಹಿಸಿ ದಾಸರಹಳ್ಳಿ ಶಾಸಕ ಆರ್.ಮಂಜುನಾಥ್ ಅವರು ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆದಿದ್ದರು.

ವಿಧಾನಸೌಧದಿಂದ 13 ಕಿಲೋ ಮೀಟರ್ ದೂರದಲ್ಲಿರುವ ಈ ಬಡಾವಣೆಗಳು ನಗರದ ರೂಪದಲ್ಲಿದ್ದರೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಕಾರಣ ಮೂಲಸೌಕರ್ಯದಿಂದ ವಂಚಿತವಾಗಿದ್ದವು.

**ಜನರ ಬಹುವರ್ಷಗಳ ಬೇಡಿಕೆಗೆ ಸರ್ಕಾರ ಸ್ಪಂದಿಸಿದೆ. ಈ ಬಡಾವಣೆಗಳು ಪಾಲಿಕೆ ವ್ಯಾಪ್ತಿಗೆ ಸೇರಿದ್ದರಿಂದ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಅನುಕೂಲವಾಗಲಿದೆ.**

**ಆರ್.ಮಂಜುನಾಥ್**, ಶಾಸಕ

## ಹೋರಾಟದ ಫಲ: ಮುನಿಯಪ್ಪ

‘ಅಧಿಕಾರಿಗಳು ಮಾಡಿದ ತಾಂತ್ರಿಕ ತಪ್ಪಿನಿಂದಾಗಿ ಕಾನ್ಷಿರಾಮ್ ನಗರ ಮತ್ತು ಲಕ್ಷ್ಮೀಪುರದ ಬಡಾವಣೆಗಳು ಪಾಲಿಕೆ ಸೇರಲು ಇಷ್ಟು ವರ್ಷ ಕಾಯಬೇಕಾಯಿತು. ಬಹುಜನ ಸಮಾಜ ಪಕ್ಷದ ಹೋರಾಟಕ್ಕೆ ಕೊನೆಗೂ ಫಲ ಸಿಕ್ಕಿದೆ’ ಎಂದು ಬಿಎಸ್‌ಪಿ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಹೇಳಿದರು.

‘ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಚಿವರಾದ ಎಸ್.ಟಿ. ಸೋಮಶೇಖರ್, ವಿ.ಸೋಮಣ್ಣ ಅವರು ನೀಡಿದ ಸಹಕಾರದಿಂದ ಬಡಾವಣೆಗಳ ಜನರ ಕನಸು ಈಡೇರಿತು. ವಿಶೇಷವಾಗಿ ‘ಪ್ರಜಾವಾಣಿ’ ನ.2ರಂದು ಪ್ರಕಟಿಸಿದ ವಿಸ್ತೃತ ವರದಿ ಸರ್ಕಾರದ ಕಣ್ತೆರೆಸಿತು. ಅದಕ್ಕಾಗಿ ಪತ್ರಿಕೆಗೆ ಈ ಭಾಗದ ಜನರ ಪರವಾಗಿ ಧನ್ಯವಾದ ಸಲ್ಲಿಸುತ್ತೇನೆ’ ಎಂದರು.

‘ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರಿನ ಸೌಕರ್ಯ, ಶಾಲೆ, ಕಾಲೇಜು, ಆಟದ ಮೈದಾನ ಅಭಿವೃದ್ಧಿಯಾಗಬೇಕಿದೆ. ಇದಕ್ಕಾಗಿ ಹೋರಾಟ ಮಾಡಿ ಜಾಗ ಮೀಸಲಿರಿಸಿದ್ದೇವೆ’ ಎಂದರು.

## ಚುನಾವಣಾ ಆಯೋಗಕ್ಕೆ ಪತ್ರ

ಈ ನಾಲ್ಕು ಬಡಾವಣೆಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿರುವ ಕಾರಣ ಇಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಸದಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸರ್ಕಾರ ಪತ್ರ ಬರೆದಿದೆ. ಆಯೋಗದ ಕಾರ್ಯದರ್ಶಿಗೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಶುಕ್ರವಾರ ಸಂಜೆಯೇ ಪತ್ರ ಬರೆದು ಕೋರಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 28-11-2020 |
|---|---|
| Page No | 3D |

# ಎರಡು ವರ್ಷಗಳ ದಾಖಲೆ ಆನ್‌ಲೈನ್‌ನಲ್ಲಿ ಲಭ್ಯ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಸ್ವಾಧೀನಾನುಭವ ಪತ್ರ ಸೇರಿದಂತೆ ಆಸ್ತಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಬಿಬಿಎಂಪಿಯು ಇದೇ ಮೊದಲ ಬಾರಿಗೆ ಪಾಲಿಕೆಯ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿದೆ. 2019-20 ಹಾಗೂ 2020-21 ಸಾಲಿನ ಈವರೆಗಿನ ದಾಖಲೆಗಳನ್ನು ನಾಗರಿಕರು ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.

ಆಸ್ತಿ ಖಾತಾ ನೋಂದಣಿ, ವರ್ಗಾವಣೆ ಮತ್ತು ವಿಭಜನೆ ಸೇರಿದಂತೆ ಹಲವು ಸೇವೆಗಳನ್ನು ಪಡೆಯಬಹುದಾದ ಇ-ಆಸ್ತಿ ತಂತ್ರಾಂಶವನ್ನು ಪಾಲಿಕೆ ಅಭಿವೃದ್ಧಿಪಡಿಸಿದೆ. ಮನೆಯಲ್ಲಿಯೇ ಕುಳಿತೇ ತ್ವರಿತವಾಗಿ ಮತ್ತು ಸುಲಭವಾಗಿ ಈ ಸೇವೆಗಳನ್ನು ಸಾರ್ವಜನಿಕರು ಪಡೆಯಬಹುದಾಗಿದೆ.

ಶಾಂತಲಾನಗರ, ನೀಲಸಂದ್ರ ಮತ್ತು ಶಾಂತಿನಗರ ವಾರ್ಡ್‌ಗಳ ಮಾಹಿತಿ ಈಗ ವೆಬ್‌ಸೈಟ್‌ನಲ್ಲಿದೆ. ಬಿಬಿಎಂಪಿಯ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿನ 100 ವಾರ್ಡ್‌ಗಳಲ್ಲಿ ಪ್ರಾರಂಭಿಕವಾಗಿ ಈ ಇ-ಆಸ್ತಿ ತಂತ್ರಾಂಶ ವ್ಯವಸ್ಥೆ ಜಾರಿಗೆ ತರಲಾಗಿದೆ. ಉಳಿದ ವಾರ್ಡ್‌ಗಳಲ್ಲಿ ಮುಂದಿನ ಆರು ತಿಂಗಳಲ್ಲಿ ಈ ವ್ಯವಸ್ಥೆ ಅಳವಡಿಸಲಾಗುತ್ತದೆ.

ಆಸ್ತಿ ನಿರ್ವಹಣೆಗೆ ಸಂಬಂಧಿಸಿದಂತೆ ನಾಗರಿಕರು ಈ ತಂತ್ರಾಂಶ ಬಳಸಿಕೊಳ್ಳಬಹುದು. ಲೋಪ-ದೋಷಗಳು ಕಂಡುಬಂದರೆ, ಪ್ರತಿಕ್ರಿಯೆ ದಾಖಲಿಸಬಹುದು. ಖಾತಾ ಪಡೆಯುವ, ಕಟ್ಟಡದ ನಕ್ಷೆ ಮಂಜೂರಾತಿ, ಉದ್ದಿಮೆ ಪರವಾನಗಿ ಸೇರಿದಂತೆ ಇನ್ನಿತರೆ ಸಾರ್ವಜನಿಕರಿಗೆ ಅನುಕೂಲವಾಗುವ ಎಲ್ಲವೂ ಈಗ ಆನ್‌ಲೈನ್‌ನಲ್ಲಿಯೇ ದೊರೆಯಲಿದೆ.

ಮಾಹಿತಿಗೆ, https://bbmp.gov.in/townplanning.html ಈ ಲಿಂಕ್ ಸಂಪರ್ಕಿಸಬಹುದು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 28-11-2020 |
| --- | --- |
| Page No | 3D |


### 'ಪಾಲಿಕೆ ಮಟ್ಟದ ವಿಚಕ್ಷಣಾ ಸಮಿತಿ'ಯ ಸಭೆ

# ಮಲ ಹೊರುವವರ ಮರು ಸಮೀಕ್ಷೆಗೆ ಸೂಚನೆ

ಪ್ರಜಾವಾಣಿ ವಾರ್ತೆ



ಮಂಜುನಾಥ ಪ್ರಸಾದ್

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಮಲ ಹೊರುವವರು (ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು) ಇನ್ನೂ ಆ ಕೆಲಸ ಮಾಡುತ್ತಿದ್ದರೆ ಅವರ ಜೀವನೋಪಾಯಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಕ್ರಮಕ್ಕೆಗೊಳ್ಳಬೇಕು. ಅವರನ್ನು ಪತ್ತೆ ಹಚ್ಚಲು ಸಮರ್ಪಕವಾಗಿ ಸಮೀಕ್ಷೆ ನಡೆಸಬೇಕು' ಎಂದು ಪಾಲಿಕೆ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಎಲ್ಲ ವಲಯಗಳ ಜಂಟಿ ಆಯುಕ್ತರಿಗೆ ಸೂಚನೆ ನೀಡಿದರು.

ಒಳಚರಂಡಿ ವ್ಯವಸ್ಥೆಯ ಮ್ಯಾನ್ ಹೋಲ್‌ಗಳಲ್ಲಿ ಹಾಗೂ ಒಳಚರಂಡಿ ಸಂಪರ್ಕವಿಲ್ಲದ ಶೌಚಾಲಯಗಳ ಮಲಗುಂಡಿಗಳನ್ನು ಸ್ವಚ್ಛಗೊಳಿಸಲು ವ್ಯಕ್ತಿಗಳನ್ನು ಬಳಸುವುದನ್ನು ನಿಷೇಧಿಸಿದ್ದರೂ ಈ ಪದ್ಧತಿ ಕೆಲವೆಡೆ ಈಗಲೂ ಮುಂದುವರಿದಿದೆ. ಅಂತಹವರನ್ನು ಪತ್ತೆ ಹಚ್ಚಲು ಬಿಬಿಎಂಪಿ ವ್ಯಾಪ್ತಿಯಲ್ಲಿ ಮರುಸಮೀಕ್ಷೆ ನಡೆಸಲಾಗುತ್ತಿದೆ. ಈ ಸಮೀಕ್ಷೆಯ ಸಿದ್ಧತೆ ಪರಿಶೀಲಿಸಲು ಆಯುಕ್ತರು 'ಪಾಲಿಕೆ ಮಟ್ಟದ ವಿಚಕ್ಷಣಾ ಸಮಿತಿ'ಯ ಸಭೆ ನಡೆಸಿದರು.

'ಪಾಲಿಕೆ ವ್ಯಾಪ್ತಿಯಲ್ಲಿ ಈ ಹಿಂದೆ ಮಲ ಹೊರುವ ಕಾಯಕದಲ್ಲಿ ತೊಡಗಿದ್ದವರ ಪಟ್ಟಿ ಸಿದ್ಧಪಡಿಸಬೇಕು. ಬಿಬಿಎಂಪಿಗೆ ಸೇರ್ಪಡೆಯಾಗಿರುವ 110 ಹಳ್ಳಿಗಳಲ್ಲಿ ಇನ್ನೂ ಒಳಚರಂಡಿ ಸಂಪರ್ಕ ಇಲ್ಲ. ಈ ಪ್ರದೇಶಗಳಲ್ಲಿ ಶೌಚಗುಂಡಿಗಳನ್ನು ಈಗಲೂ ಮಲಹೊರುವ ವ್ಯಕ್ತಿಗಳಿಂದಲೇ ಸ್ವಚ್ಛಗೊಳಿಸಲಾಗುತ್ತಿದೆಯೇ ಎಂಬ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಬೇಕು. ಈ ಹಿಂದೆ ಮಲ ಹೊರುವ ಕಾಯಕ ಮಾಡುತ್ತಿದ್ದವರಿಗೆ ಪರ್ಯಾಯ ಕೆಲಸ ಒದಗಿಸಲು ಈ ಸಮೀಕ್ಷೆ ಅತ್ಯಂತ ಮಹತ್ವದ್ದು' ಎಂದು ಆಯುಕ್ತರು ನಿರ್ದೇಶನ ನೀಡಿದರು.

ಕಲ್ಯಾಣ ವಿಭಾಗದ ಸಹಾಯಕ ಆಯುಕ್ತ ಸೋಮಪ್ಪ ಕಡಕೋಳ, 'ಪಾಲಿಕೆ ವ್ಯಾಪ್ತಿಯಲ್ಲಿ ಮಲ ಹೊರುವವರ ಸಮೀಕ್ಷೆ 2013ರಲ್ಲಿ ನಡೆದಿತ್ತು. ಈ ಕಾಯಕದಲ್ಲಿ ತೊಡಗಿದ್ದ 201 ಮಂದಿಯನ್ನು ಆಗ ಪತ್ತೆ ಮಾಡಲಾಗಿತ್ತು. ಮಲ ಹೊರುವ ಕಾಯಕ ಮಾಡಿಕೊಂಡಿದ್ದವರಿಗೆ ಕೇಂದ್ರ ಸರ್ಕಾರವು ₹ 40 ಸಾವಿರ ಸಹಾಯಧನ ನೀಡುತ್ತದೆ. ಈಗಾಗಲೇ 71 ಮಂದಿಗೆ ಈ ಸವಲತ್ತು ಒದಗಿಸಲಾಗಿದೆ. ಇನ್ನುಳಿದವರಿಗೆ ಸಹಾಯಧನ ಒದಗಿಸಲು ಅಗತ್ಯ ದಾಖಲೆ ಪಡೆದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ' ಎಂದರು.

## '1,139 ಮಂದಿಯಿಂದ ಕಾಯಕ'

'ಯಲಹಂಕ, ಬೊಮ್ಮನಹಳ್ಳಿ ಹಾಗೂ ದಾಸರಹಳ್ಳಿ ವಲಯ ಹೊರತುಪಡಿಸಿ ಇನ್ನುಳಿದ ಐದು ವಲಯಗಳಲ್ಲಿ ಇತ್ತೀಚೆಗೆ ನಡೆಸಿದ ಸಮೀಕ್ಷೆಯಲ್ಲಿ 1,139 ಮಂದಿ ಮಲ ಹೊರುವ ಕಾಯಕದಲ್ಲಿ ತೊಡಗಿದ್ದವರನ್ನು ಪತ್ತೆ ಮಾಡಲಾಗಿದೆ' ಎಂದು ಸೋಮಪ್ಪ ಕಡಕೋಳ ಮಾಹಿತಿ ನೀಡಿದರು.

## ಕಲ್ಯಾಣ ಕಾರ್ಯಕ್ರಮಗಳಡಿ ಹೆಚ್ಚುವರಿ ಸವಲತ್ತು: ಮಂಜುನಾಥ ಪ್ರಸಾದ್

'ಮಲ ಹೊರುವ ಕೆಲಸದಲ್ಲಿ ತೊಡಗಿದ್ದವರಿಗೆ ಕೇಂದ್ರ ಸರ್ಕಾರ ನೀಡುವ ₹ 40 ಸಾವಿರ ಸಹಾಯಧನದ ಜೊತೆಗೆ ಮತ್ತಷ್ಟು ಮೊತ್ತವನ್ನು ಸೇರಿಸಿ ನೀಡಲು ಅಗತ್ಯ ಕ್ರಮವಹಿಸಬೇಕು. ಸ್ವಂತ ವಸತಿ ಇಲ್ಲದವರಿಗೆ ಒಂಟಿಮನೆ ಯೋಜನೆಯಡಿ ಮನೆ ಕಟ್ಟಿಸಿ ಕೊಡಬೇಕು. ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಧನ ಒದಗಿಸಬೇಕು' ಎಂದು ಬಿಬಿಎಂಪಿ ಕಲ್ಯಾಣ ವಿಭಾಗದ ಅಧಿಕಾರಿಗಳಿಗೆ ಮಂಜುನಾಥ ಪ್ರಸಾದ್ ಸೂಚನೆ ನೀಡಿದರು.

| Date | 28-11-2020 |
|---|---|
| Page No | 2 |

ಅನಾವರಣ | ಮೇಯರ್ ಮುತ್ತಣ್ಣ ಸಿನಿಮಾ ಯುವಕರಿಗೆ ಸ್ಫೂರ್ತಿ: ನಟ ಶಿವರಾಜ್‌ಕುಮಾರ್ ಬಣ್ಣನೆ | ಡಾ. ರಾಜ್‌ಕುಮಾರ್ ಪ್ರತಿಮೆ ಸ್ಥಾಪನೆ

# ಪಾಲಿಕೆ ಕಚೇರಿ ಆವರಣದಲ್ಲಿ ಮೇಯರ್ ಮುತ್ತಣ್ಣ ಪ್ರತಿಮೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ವರನಟ ಡಾ| ರಾಜಕುಮಾರ್ ಅವರ ಮೇಯರ್ ಮುತ್ತಣ್ಣ ಮಾದರಿಯ ಪುತ್ಥಳಿಯನ್ನು ಶುಕ್ರವಾರ ನಟ ಶಿವರಾಜ್ ಕುಮಾರ್ ಅವರು ಅನಾವರಣ ಮಾಡಿದರು.

ಬಿಬಿಎಂಪಿ ನೌಕರರ ಕನ್ನಡ ಸಂಘ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದ ಮೇರುನಟ ಡಾ| ರಾಜ್ ಪುತ್ಥಳಿ ಅನಾವರಣ ಮತ್ತು 65ನೇ ಕನ್ನಡ ರಾಜ್ಯೋತ್ಸವ, ನಗರ ದೇವತೆ ಅಣ್ಣಮ್ಮ ದೇವಿ ಉತ್ಸವ ಸಮಾರಂಭದಲ್ಲಿ ಶಿವರಾಜಕುಮಾರ್ ಅವರು ಮೇಯರ್ ಮುತ್ತಣ್ಣ ಮಾದರಿಯ ಪುತ್ಥಳಿಯನ್ನು ಅನಾವರಣ ಮಾಡಿದರು.

ಈ ವೇಳೆ ಮಾತನಾಡಿದ ನಟ ಶಿವರಾಜಕುಮಾರ್, ಅಪ್ಪಾಜಿ ನಟಿಸಿದ ಮೇಯರ್ ಮುತ್ತಣ್ಣ ಸಿನಿಮಾ ಯುವಕರಿಗೆ ಸ್ಫೂರ್ತಿ ಆಯ್ತು. ಆ ಗೌರವ ನಮಗೆ ಸಿಗುತ್ತಿರುವುದು ನಮ್ಮ ಪುಣ್ಯ. ಅಪ್ಪಾಜಿ ಹಾಕಿದ ದಾರಿಯಲ್ಲೇ ನಾವು ನಡೆಯುತ್ತಿದ್ದೇವೆ ಎಂದು ಹೇಳಿದರು.

ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಮಾತನಾಡಿ, ಜನರ ಸೇವೆಗೆ ನಿರತವಾಗಿರುವ ಪಾಲಿಕೆ ಆವರಣದಲ್ಲಿ ಡಾ| ಬಿ.ಆರ್. ಅಂಬೇಡ್ಕರ್, ಸಾಲಪ್ಪ, ಲಕ್ಷ್ಮೀದೇವಿ, ಡಾ| ರಾಜಕುಮಾರ್ ಸೇರಿ ಮಹನೀಯರ ಪುತ್ಥಳಿಗಳನ್ನು ಪ್ರತಿಷ್ಠಾಪಿಸುವ ಮೂಲಕ ಈ ಆವರಣ ಪವಿತ್ರವಾಗಿದೆ. ಡಾ| ರಾಜಕುಮಾರ್ ಅವರ ಸರಳತೆಯನ್ನು ಬಿಬಿಎಂಪಿ ನೌಕರರು ಅಳವಡಿಸಿಕೊಳ್ಳಬೇಕು ಎಂದರು. ಸಮಾರಂಭದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆ ಬಿಜೆಪಿ ಅಧ್ಯಕ್ಷ ಎನ್. ಆರ್.ರಮೇಶ್, ಮಾಜಿ ಮೇಯರ್‌ಗಳಾದ ಜೆ.ಹುಚ್ಚಪ್ಪ, ಗೌತಮ್ ಕುಮಾರ್, ಸಂಘದ ಅಧ್ಯಕ್ಷ ಸಂಗೊಳ್ಳಿ ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಅಮೃತರಾಜ್ ಇದ್ದರು.



ಬಿಬಿಎಂಪಿಯ ಕೇಂದ್ರ ಕಚೇರಿ ಆವರಣದಲ್ಲಿ ಡಾ| ರಾಜ್ ಕುಮಾರ್ ಅವರ ಪುತ್ಥಳಿಯನ್ನು ನಟ ಶಿವರಾಜ್‌ಕುಮಾರ್ ಅವರು ಅನಾವರಣ ಮಾಡಿದರು. ಆಯುಕ್ತ ಮಂಜುನಾಥ್ ಪ್ರಸಾದ್ ಇದ್ದರು.

## ಸಿಬ್ಬಂದಿ ಮೇಲೆ ಬೌನ್ಸರ್ ಹಲ್ಲೆ

ಕೇಂದ್ರ ಕಚೇರಿಯ ಮೇರುನಟ ಡಾ| ರಾಜ್ ಪುತ್ಥಳಿ ಅನಾವರಣ ಮತ್ತು 65ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಭದ್ರತೆಗೆ ಬಿಬಿಎಂಪಿ ನೌಕರರ ಕನ್ನಡ ಸಂಘ ನಿಯೋಜಿಸಿದ್ದ ಬೌನ್ಸರ್‌ಗಳು ಬಿಬಿಎಂಪಿಯ ಆಯುಕ್ತರ ಕಚೇರಿಯ ಸಹಾಯಕ ಅಧಿಕಾರಿಗೆ ಹಲ್ಲೆ ನಡೆಸಿದ ಘಟನೆ ನಡೆದಿದೆ.

ಸಮಾರಂಭದ ಹಿನ್ನೆಲೆಯಲ್ಲಿ ಬಿಬಿಎಂಪಿ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ಕೇಂದ್ರ ಕಚೇರಿ ಪ್ರವೇಶಕ್ಕೆ ಅನುಮತಿ ನೀಡದೇ ಬೌನ್ಸರ್‌ಗಳು ದರ್ಪ ತೋರಿದ್ದಾರೆ. ಪ್ರಶ್ನೆ ಮಾಡಿದ ಬಿಬಿಎಂಪಿ ಆಯುಕ್ತರ ಕಚೇರಿಯ ಸಹಾಯಕ ಸಿಬ್ಬಂದಿಯೊಬ್ಬರಿಗೆ ಬೌನ್ಸರ್‌ಗಳು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಜತೆಗೆ ಇತರೆ ಅಧಿಕಾರಿ ಸಿಬ್ಬಂದಿಗೂ ಅವಾಚ್ಯ ಶಬ್ದಗಳಿಂದ ನಿಂಧಿಸಿದ ಘಟನೆ ನಡೆದಿದೆ.

ಬಿಬಿಎಂಪಿ ಕೇಂದ್ರ ಕಚೇರಿಗೆ ಭದ್ರತಾ ಸಿಬ್ಬಂದಿ ಹಾಗೂ ಮಾರ್ಷಲ್ ನೇಮಕ ಇದ್ದರೂ ಬೌನ್ಸರ್ ನೇಮಕ ಮಾಡಿರುವ ಬಗ್ಗೆ ಬಿಬಿಎಂಪಿಯ ಹಿರಿಯ ಅಧಿಕಾರಿಗಳಿಗೆ ಮಾಹಿತಿಯೇ ಇಲ್ಲ. ಪಾಲಿಕೆ ಸಿಬ್ಬಂದಿಯೊಬ್ಬರಿಗೆ ಬೌನ್ಸರ್‌ಗಳು ಥಳಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಬಗ್ಗೆಯೂ ಅಧಿಕಾರಿಗಳಿಗೆ ಮಾಹಿತಿ ಇಲ್ಲ.

**ದೂರು ಬಂದಿಲ್ಲ:** ಗಲಾಟೆಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ಜೆ. ಮಂಜುನಾಥ, ಸಮಾರಂಭಕ್ಕೆ ನಟ ಶಿವರಾಜ್ ಕುಮಾರ್ ಆಗಮಿಸುತ್ತಾರೆ ಎಂದು ಬಿಬಿಎಂಪಿ ಅನುಮತಿ ಇಲ್ಲದೇ ಖಾಸಗಿ ಭದ್ರತೆ ನಿಯೋಜನೆ ಮಾಡಿಕೊಳ್ಳಲಾಗಿತ್ತು. ಈ ವೇಳೆ ಬೌನ್ಸರ್‌ಗಳು ಹಾಗೂ ಬಿಬಿಎಂಪಿ ಸಿಬ್ಬಂದಿ ನಡುವೆ ಗಲಾಟೆ ನಡೆದಿರುವ ಬಗ್ಗೆ ಯಾವುದೇ ದೂರು ಬಂದಿಲ್ಲ, ಶನಿವಾರ ಈ ಬಗ್ಗೆ ಬಿಬಿಎಂಪಿ ಭದ್ರತಾ ಸಿಬ್ಬಂದಿ ವಿಚಾರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಕನ್ನಡಪ್ರಭ

| Date | 28-11-2020 |
| --- | --- |
| Page No | 3 |


# ಬಿಬಿಎಂಪಿಗೆ ಮತ್ತಷ್ಟು ಬಡಾವಣೆ ಸೇರ್ಪಡೆ

**ಬೆಂಗಳೂರು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಯಶವಂತಪುರ ಹೋಬಳಿಯ ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಲಕ್ಷ್ಮೀಪುರ ಗ್ರಾಮದ ಎಲ್ಲ ಬಡಾವಣೆಗಳನ್ನು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶೆಟ್ಟಿಹಳ್ಳಿ ವಾರ್ಡ್‌ಗೆ ಸೇರ್ಪಡೆಗೊಳಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಕಗ್ಗಲೀಪುರ ವ್ಯಾಪ್ತಿಯ ಮಲ್ಲಸಂದ್ರ ಮತ್ತು ಉತ್ತರಹಳ್ಳಿ ಮನವರ್ತೆ ಕಾವಲ್ ಗ್ರಾಮದ ಭಾಗಶಃ ಪ್ರದೇಶಗಳ ಸೇರ್ಪಡೆಗೆ ಒಪ್ಪಿಗೆ ನೀಡಲಾಗಿದೆ. ಜತೆಗೆ ಮೆಟ್ರೋ ರೈಲು ಯೋಜನೆ ಅನುಷ್ಠಾನಕ್ಕೆ ರಚಿಸಲಾದ ಉನ್ನತ ಸಮಿತಿಗೆ ಮೂವರು ಹೆಚ್ಚುವರಿ ಸದಸ್ಯರನ್ನು ಸೇರ್ಪಡೆ ಮಾಡಲು ಸಚಿವ ಸಂಪುಟ ಸಭೆ ಅನುಮತಿ ನೀಡಿದೆ.

| Date | 28-11-2020 |
|---|---|
| Page No | 3 |

# ಗುಣಮುಖ ಆದವರಲ್ಲಿ ಮತ್ತೆ ಕೊರೋನಾ!

## ನಗರದಲ್ಲಿ ಗುಣಮುಖರಾಗಿದ್ದ 35 ಮಂದಿಯಲ್ಲಿ ಸೋಂಕು ಪತ್ತೆ | ನಿಧಾನವಾಗಿ ಏರುತ್ತಿರುವ ಮರು ಸೋಂಕು ಪ್ರಕರಣ ವೈದ್ಯರಿಂದ ಅಧ್ಯಯನ ಶುರು | ರೋಗ ನಿರೋಧಕ ಶಕ್ತಿ ಕ್ಷೀಣದಿಂದ ಮತ್ತೆ ಕೊರೋನಾ ಸಾಧ್ಯತೆ: ಜಾವೇದ್ ಅಖ್ತರ್

• **ಕನ್ನಡ ಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಒಂದು ಕಡೆ ಕೊರೋನಾ ಸೋಂಕಿನ ಪ್ರಮಾಣ ಇಳಿಕೆಯಾಗುತ್ತಿದ್ದರೆ, ಮತ್ತೊಂದು ಕಡೆ ಸೋಂಕಿನಿಂದ ಗುಣಮುಖರಾದವರಿಗೆ ಪುನಃ ಸೋಂಕು ಕಾಣಿಸಿಕೊಳ್ಳುವ ಪ್ರಕರಣಗಳು ನಿಧಾನವಾಗಿ ಏರಿಕೆಯಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.



ದಕ್ಷಿಣ ಭಾರತದಲ್ಲೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಸೆಪ್ಟೆಂಬರ್ 6ರಂದು ರಾಜ್ಯದ'ಲ್ಲಿ ಮೊದಲಸೋಂಕು ಮರುಕಳಿಸಿದ ಪ್ರಕರಣ ವರದಿಯಾಗಿತ್ತು. ಆ ಬಳಿಕ ಈವರೆಗೆ ಬೆಂಗಳೂರಿನಲ್ಲೇ ಇಂತಹ 35ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗಿದೆ. ಇಡೀ ರಾಜ್ಯದಲ್ಲಿ ನೂರರ ಒಳಗೆ ಸೋಂಕು ಮರುಕಳಿಸಿರುವ ಪ್ರಕರಣಗಳಿವೆ ಎಂದು ರಾಜ್ಯ ಸರ್ಕಾರದ ಅಧಿಕೃತ ಮೂಲಗಳು ತಿಳಿಸಿವೆ.

'ರಾಜ್ಯದಲ್ಲಿಸೋಂಕುಮರುಕಳಿಸಿರುವಪ್ರಕರಣಗಳು ತೀರಾ ವಿರಳವಾಗಿದೆ. ಒಟ್ಟು ಇಂತಹ ಎಷ್ಟು ಪ್ರಕರಣಗಳಿವೆ ಎಂಬುದರ ಬಗ್ಗೆ ನಮ್ಮಲ್ಲಿ ಖಚಿತ ಮಾಹಿತಿಯಿಲ್ಲ, ಆದರೆನೂರರಒಳಗೆಇರಬಹುದು. ಸೋಂಕು ಮರುಕಳಿಸಿದ ಪ್ರಕರಣಗಳ ಬಗ್ಗೆ ನಮ್ಮ ವೈದ್ಯರು ಕೂಲಂಕಷವಾಗಿ ಅಧ್ಯಯನ ನಡೆಸುತ್ತಿದ್ದಾರೆ' ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ 'ಕನ್ನಡ ಪ್ರಭ'ಕ್ಕೆ ತಿಳಿಸಿದ್ದಾರೆ.

**ವೈದ್ಯರು ಏನಂತಾರೆ?:** ವಿಕ್ಟೋರಿಯಾ ಆಸ್ಪತ್ರೆಯ ಕೋವಿಡ್ ವಾರ್ಡ್‌ನ ನೋಡಲ್ ಅಧಿಕಾರಿ, ಮೈಕ್ರೋಬಯಾಲಜಿಸ್ಟ್ ಡಾ। ಅಸೀಮಾ ಬಾನು ಪ್ರಕಾರ, ತಮ್ಮ ಬಳಿ ಈವರೆಗೆ ಸೋಂಕು ಮರುಕಳಿಸಿರುವ ಪ್ರಕರಣಗಳ ಬಂದಿಲ್ಲ. ಆದರೆ ಅನೇಕ ರೋಗಿಗಳು ಗುಣಮುಖರಾದ ಬಳಿಕವೂ ಅವರನ್ನು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಿದಾಗ ಪಾಸಿಟಿವ್ ಬಂದಿರುವ ಉದಾಹರಣೆಗಳಿವೆ. ಮೇ ತಿಂಗಳಲ್ಲಿ ನಮ್ಮಲ್ಲಿಗುಣಮುಖರಾಗಿ ಹೋದವರು ನವೆಂಬರ್‌ನಲ್ಲಿ ಪ್ರತಿರೋಧ ಶಕ್ತಿಯ ಪರೀಕ್ಷೆ ನಡೆಸಿದಾಗ ಅವರಲ್ಲಿ ಪ್ರತಿರೋಧ ಇರುವುದು ಕಂಡುಬಂದಿತ್ತು. ಅದೇ ರೀತಿ ಕೊರೋನಾ ವೈರಸ್‌ನ ಒಂದು ತಳಿಯಿಂದ ಕೋವಿಡ್ ಬಂದು ಹೋಗಿದ್ದವರಿಗೆ ಅದೇ ವೈರಸ್‌ನ ಇನ್ನೊಂದು ತಳಿಯಿಂದ ಮತ್ತೆ ಸೋಂಕು ಬರುವ ಸಂಭವವೂ ಇರುತ್ತದೆ' ಎಂದು ಹೇಳುತ್ತಾರೆ.

**ಲಕ್ಷಣ ಸಹಿತ, ಲಕ್ಷಣ ರಹಿತರು:** ಸೋಂಕು ಮರುಕಳಿಸಿದ ಕೆಲವು ಪ್ರಕರಣಗಳಲ್ಲಿ ಮೊದಲ ಬಾರಿ ಸೋಂಕು ಬಂದಾಗ ರೋಗ ಲಕ್ಷಣಗಳನ್ನು ಹೊಂದಿಲ್ಲದವರು ಎರಡನೇ ಬಾರಿ ಬಂದಾಗ ತೀವ್ರ ರೋಗ ಲಕ್ಷಣಗಳನ್ನು ಹೊಂದಿರುವುದು ಅಥವಾ ಮೊದಲ ಬಾರಿ ಬಂದಾಗ ರೋಗ ಲಕ್ಷಣಗಳು ಇದ್ದರೆ ಎರಡನೇ ಬಾರಿ ಬಂದಾಗ ಯಾವುದೇ ರೋಗ ಲಕ್ಷಣಗಳನ್ನು ಹೊಂದಿರಲಿಲ್ಲಎಂದು ಇಂತಹ ರೋಗಿಗಳಿಗೆ ಚಿಕಿತ್ಸೆ ನೀಡಿದ ವೈದ್ಯರು ತಮ್ಮ ಅನುಭವ ಹೇಳಿಕೊಂಡಿದ್ದಾರೆ.

### ನಿರೋಧಕ ಶಕ್ತಿ ಕ್ಷೀಣಿಸಲು ಕಾರಣ?

ಒಮ್ಮೆ ಕೋವಿಡ್ ಬಂದು ಹೋದವರಲ್ಲಿ ಮೂರು ತಿಂಗಳ ಕಾಲ ಜೀವ ನಿರೋಧಕ ಶಕ್ತಿ ಇರುತ್ತದೆ. ಆಮೇಲೆ ಜೀವ ನಿರೋಧಕತೆ ಕ್ಷೀಣವಾಗಬಹುದು. ಇಂತಹ ಸಂದರ್ಭದಲ್ಲಿ ಕೋವಿಡ್ ಮರುಕಳಿಸಬಹುದು ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅಭಿಪ್ರಾಯ ಪಡುತ್ತಾರೆ. ಹಾಗೆಯೇ ನಮ್ಮಲ್ಲಿ ಕೋವಿಡ್ ಬಂದು ಗುಣಮುಖರಾದವರನ್ನು ಬಿಡುಗಡೆ ಮಾಡುವ ಮೊದಲು ಮತ್ತೆ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸುವ ಕ್ರಮವಿಲ್ಲ. ಆದ್ದರಿಂದ ಅನೇಕ ಪ್ರಕರಣಗಳು ಸೋಂಕಿನ ಮರುಕಳಿಕೆಯೇ ಅಥವಾ ಇದ್ದ ಸೋಂಕೇ ಮುಂದುವರಿದಿದೆಯೇ ಎಂದು ಹೇಳುವುದು ಕಷ್ಟ ಎಂದ ವರು ಹೇಳುತ್ತಾರೆ. 'ಕೆಲವು ವ್ಯಕ್ತಿಗಳಲ್ಲಿ ಅಲ್ಪ ಕಾಲೀನ ರೋಗ ನಿರೋಧಕತೆ ಇರುತ್ತದೆ. ಅಂಥವರಲ್ಲಿ ತ್ವರಿತವಾಗಿ ಸೋಂಕು ಮರುಕಳಿಸುವ ಸಂಭವ ಇರುತ್ತದೆ. ಒಮ್ಮೆ ಸೋಂಕಿನಿಂದ ಗುಣಮುಖರಾದ ತಕ್ಷಣ ಮತ್ತೆ ಸೋಂಕು ಬರಲಾರದು ಎಂದು ಭಾವಿಸಬಾರದು. ಸೋಂಕು ಬಾರ ದಂತೆ ತಡೆಯುವ ಮುನ್ನೆಚ್ಚರಿಕೆ ಕ್ರಮಗಳನ್ನು ಸದಾ ಪಾಲಿಸುತ್ತಿರಬೇಕು' ಎಂದು ಆರೋಗ್ಯ ತಜ್ಞರು ಅಭಿಪ್ರಾಯ ಪಡುತ್ತಾರೆ.

### 19 ಸಾವಿರಕ್ಕೆ ಸಕ್ರಿಯ ಕೇಸ್

**ಬೆಂಗಳೂರು**: ರಾಜಧಾನಿ ಬೆಂಗಳೂರಿನಲ್ಲಿ ಶುಕ್ರವಾರ 808 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 549 ಗುಣಮುಖರಾಗಿದ್ದಾರೆ. ಆರು ಮಂದಿ ಮೃತಪಟ್ಟಿದ್ದಾರೆ.

ನಗರದ ಒಟ್ಟು ಕೊರೋನಾ ಸೋಂಕಿತರ ಸಂಖ್ಯೆ 3,67,885 ಏರಿಕೆಯಾಗಿದ್ದು, 3,44,687 ಗುಣಮುಖರಾಗಿದ್ದಾರೆ. ಮೃತರ ಸಂಖ್ಯೆ 4,114 ಏರಿಕೆಯಾಗಿದೆ. ನಗರದ ಸಕ್ರಿಯ ಪ್ರಕರಣಗಳ ಸಂಖ್ಯೆ 19,083ಕ್ಕೆ ಏರಿಕೆಯಾಗಿದ್ದು, ನಗರದ ವಿವಿಧ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ 184 ಮಂದಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

### ಕಾಲೇಜು ಆರಂಭ: ಮೂವರು ವಿದ್ಯಾರ್ಥಿ, ಒಬ್ಬ ಶಿಕ್ಷಕಗೆ ಸೋಂಕು

#### ಈವರೆಗೆ ಒಟ್ಟು ಸೋಂಕಿತರ ಸಂಖ್ಯೆ 220ಕ್ಕೆ ಏರಿಕೆ

**ಬೆಂಗಳೂರು**: ಕಾಲೇಜುಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ ನಗರದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಕೊರೋನಾ ಸೋಂಕು ಪರೀಕ್ಷೆ ಮುಂದುವರೆದಿದ್ದು, ಶುಕ್ರವಾರ ಮೂವರು ವಿದ್ಯಾರ್ಥಿಗಳು ಹಾಗೂ ಒಬ್ಬ ಶಿಕ್ಷಕರಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಈವರೆಗೆ ಒಟ್ಟು ಸೋಂಕಿತರ ಸಂಖ್ಯೆ 220ಕ್ಕೆ ಏರಿಕೆಯಾಗಿದೆ.

ಶುಕ್ರವಾರ ಒಟ್ಟು 1,158 ಕೋವಿಡ್ ಪರೀಕ್ಷೆ ನಡೆಸಲಾಗಿದ್ದು, ಈ ಪೈಕಿ 159 ಶಿಕ್ಷಕರು, 912 ವಿದ್ಯಾರ್ಥಿಗಳು ಹಾಗೂ 117 ಇತರೆ ಸಿಬ್ಬಂದಿಯಾಗಿದ್ದಾರೆ. ಒಟ್ಟು 366 ಕೇಂದ್ರದಲ್ಲಿ ಪರೀಕ್ಷೆ ನಡೆಸಲಾಗಿದ್ದು, ಪರೀಕ್ಷೆಗೆ ಬಿಬಿಎಂಪಿ 95 ತಂಡ ನಿಯೋಜಿಸಿದೆ.

ನ.16 ರಿಂದ ನ.27ರ ವರೆಗೆ ನಗರದಲ್ಲಿ ಒಟ್ಟು 48,828 ವಿದ್ಯಾರ್ಥಿ, ಶಿಕ್ಷಕರಿಗೆ ಪರೀಕ್ಷೆಗೆ ಒಳಪಡಿಸಲಾಗಿದೆ. ಈ ಪೈಕಿ 220 ಮಂದಿಗೆ ಸೋಂಕು ದೃಢಪಟ್ಟಿದೆ. ಇದರಲ್ಲಿ 155 ಜನ ವಿದ್ಯಾರ್ಥಿಗಳು ಹಾಗೂ 63 ಮಂದಿ ಸಿಬ್ಬಂದಿಯಾಗಿದ್ದಾರೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ. ಬಿಬಿಎಂಪಿ ಎಂಟು ವಲಯಗಳ ಪೈಕಿ ಅತಿ ಹೆಚ್ಚು ಯಲಹಂಕ ವಲಯದಲ್ಲಿ 9,319 ರಾಜರಾಜೇಶ್ವರಿನಗರ 8,425, ದಕ್ಷಿಣ 7,863, ಪಶ್ಚಿಮ 7,351, ಪೂರ್ವ 6,255, ಬೊಮ್ಮನಹಳ್ಳಿ 3,676, ಮಹದೇವಪುರ 3,542 ಹಾಗೂ ದಾಸರಹಳ್ಳಿ ವಲಯದಲ್ಲಿ 2,397 ಮಂದಿ ವಿದ್ಯಾರ್ಥಿ, ಶಿಕ್ಷಕರು ಹಾಗೂ ಸಿಬ್ಬಂದಿಗೆ ಕೋರೋನಾ ಸೋಂಕು ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಕನ್ನಡಪ್ರಭ

| Date | 28-11-2020 |
| --- | --- |
| Page No | 3 |


# ಪಾಲಿಕೆ ಆನ್‌ಲೈನ್‌ನಲ್ಲೇ ಕಟ್ಟಡಗಳಿಗೆ ಸಿಸಿ, ಒಸಿ ಲಭ್ಯ

## 10 ಸಾವಿರ ಕಟ್ಟಡಗಳಿಗೆ ನಕ್ಷೆ ಮಂಜೂರು | ಅನುಮತಿಗಾಗಿ ಕಚೇರಿ ಅಲೆಯಬೇಕಿಲ್ಲ

**ಬೆಂಗಳೂರು**: ಕಳೆದ ಎರಡು ವರ್ಷ ಬಿಬಿಎಂಪಿ ವ್ಯಾಪ್ತಿಯಲ್ಲಿ 10,311 ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಕ್ಷೆ ಮಂಜೂರಾತಿ ನೀಡಲಾಗಿದ್ದು, ಈ ವರೆಗೆ 356 ಕಟ್ಟಡ ನಿರ್ಮಾಣ ಆರಂಭಿಸುವ ಅನುಮತಿ (ಸಿಸಿ) ಹಾಗೂ 329 ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರ (ಒಸಿ) ನೀಡಲಾಗಿದೆ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಮಾಹಿತಿ ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಕ್ಷೆ ಮಂಜೂರಾತಿ, ಕಟ್ಟಡ ನಿರ್ಮಾಣ ಆರಂಭಿಸುವ ಅನುಮತಿ (ಸಿಸಿ) ಹಾಗೂ ಕಟ್ಟಡ ಸ್ವಾಧೀನಾನುಭವ ಪತ್ರ (ಒಸಿ) ನೀಡುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಮಾಡಲಾಗಿದೆ. ಸಾರ್ವಜನಿಕರು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ಅನುಮತಿಗಾಗಿ ಬಿಬಿಎಂಪಿ ಕಚೇರಿಗಳಿಗೆ ಅಲೆದಾಡಬೇಕಾಗಿಲ್ಲ ಎಂದರು.

ಅರ್ಜಿ ಸಲ್ಲಿಕೆ ಮಾಡಿದ ಬಳಿಕ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಅರ್ಜಿ ಸಲ್ಲಿಸಿ ಕಟ್ಟಡ ನಿರ್ಮಾಣ ಕಾರ್ಯ ಆರಂಭಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಕನ್ನಡಪ್ರಭ

| Date | 28-11-2020 |
| --- | --- |
| Page No | 4 |

# ‘30ಕ್ಕೆ ಕಸ ವಿಲೇವಾರಿ ಸ್ಥಗಿತ’

## ಗುತ್ತಿಗೆದಾರರ ಸಂಘದಿಂದ ಪಾಲಿಕೆ ಆಯುಕ್ತರಿಗೆ ಪತ್ರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಆಟೋ ಹಾಗೂ ಕಾಂಪ್ಯಾಕ್ಟರ್ ಬಾಡಿಗೆ ಹಣ ಬಿಡುಗಡೆ ಮಾಡದೇ ಇರುವುದನ್ನು ಖಂಡಿಸಿ ನ.30ರಂದು ತ್ಯಾಜ್ಯ ವಿಲೇವಾರಿ ಸ್ಥಗಿತಗೊಳಿಸಿ ಪಾಲಿಕೆ ಹಣಕಾಸು ವಿಭಾಗದ ವಿಶೇಷ ಆಯುಕ್ತರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸುವುದಾಗಿ ನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರ ಹಾಗೂ ಗುತ್ತಿಗೆದಾರರ ಸಂಘ ಪಾಲಿಕೆ ಆಯುಕ್ತರಿಗೆ ತಿಳಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಆಟೋ ಹಾಗೂ ಕಾಂಪ್ಯಾಕ್ಟರ್‌ಗಳಿಗೆ ಕಳೆದ 11 ತಿಂಗಳಿಂದ ಬಾಡಿಗೆ ಹಣ ಬಿಡುಗಡೆ ಮಾಡಿಲ್ಲ. ಕಳೆದ ನ.5ರಂದು ನಡೆದ ಸಭೆಯಲ್ಲಿ ತಕ್ಷಣ ಹಣ ಬಿಡುಗಡೆ ಮಾಡುವಂತೆ ಬಿಬಿಎಂಪಿ ಆಯುಕ್ತರು ಹಣಕಾಸು ವಿಭಾಗದ ವಿಶೇಷ ಆಯುಕ್ತೆ ತುಳಸಿ ಮದಿನೇನಿ ಅವರಿಗೆ ಸೂಚಿಸಿದ್ದರು. ಆದರೂ ಈವರೆಗೆ ಹಣ ಬಿಡುಗಡೆ ಮಾಡಿಲ್ಲ ಎಂದು ಬರೆದಿರುವ ಪತ್ರದಲ್ಲಿ ತಿಳಿಸಲಾಗಿದೆ.

ತುಳಸಿ ಮದಿನೇನಿ ಅವರು ಹಣಕಾಸು ವಿಭಾಗದ ವಿಶೇಷ ಆಯುಕ್ತರಾಗಿ ನೇಮಕಗೊಂಡ ದಿನದಿಂದ ಒಂದಲ್ಲ ಒಂದು ಸಮಸ್ಯೆ ಉಂಟು ಮಾಡುತ್ತಿದ್ದಾರೆ. ನಗರದ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಗುತ್ತಿಗೆದಾರರಿಗೆ ತೊಂದರೆ ಉಂಟು ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘದ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ಪತ್ರದಲ್ಲಿ ತಿಳಿಸಿದ್ದಾರೆ.

| Date | 28-11-2020 |
|---|---|
| Page No | 9 |

5 ಗ್ರಾಮಗಳ ಸೇರ್ಪಡೆಗೆ ಸಚಿವ ಸಂಪುಟ ಸಭೆ ನಿರ್ಧಾರ

# ಮತ್ತಷ್ಟು ಹಿಗ್ಗಿದ ಬಿಬಿಎಂಪಿ ವ್ಯಾಪ್ತಿ

**ವಿಕ ಸುದ್ದಿಲೋಕ** ಬೆಂಗಳೂರು

ಯಶವಂತಪುರ ಮತ್ತು ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಐದು ಗ್ರಾಮಗಳನ್ನು ಬಿಬಿಎಂಪಿಗೆ ಸೇರಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಪಾಲಿಕೆ ತೆಕ್ಕೆಗೆ ಸೇರಲಿರುವ ಈ ಹಳ್ಳಿಗಳ ಚಿತ್ರಣವೇ ಬದಲಾಗಲಿದ್ದು, ಅಗತ್ಯ ಮೂಲಸೌಕರ್ಯಗಳನ್ನು ಹೊಂದಲಿವೆ.

**ಗ್ರಾಪಂ ಚುನಾವಣೆ ನಡೆಸದಂತೆ ಚುನಾವಣಾ ಆಯೋಗಕ್ಕೆ ಕೋರಿಕೆ**

**ಸ್ಥಳೀಯರ ಬೇಡಿಕೆಗೆ ಸರಕಾರದ ಮನ್ನಣೆ**

ಯಶವಂತಪುರ ವಿಧಾನಸಭಾ ಕ್ಷೇತ್ರದ ಕಗ್ಗಲೀಪುರ ಗ್ರಾಮ ಪಂಚಾಯಿತಿಯ ಮಲ್ಲಸಂದ್ರ, ಉತ್ತರಹಳ್ಳಿ ಮನವರ್ತೆ ಕಾವಲ್ ಗ್ರಾಮದ ಭಾಗಶಃ ಪ್ರದೇಶಗಳು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಲಕ್ಷ್ಮೀಪುರ ಕಂದಾಯ ಗ್ರಾಮ, ಕಾನ್ಶೀರಾಮ್‌ನಗರ ಮತ್ತು ಲಕ್ಷ್ಮೀಪುರದ ಎಲ್ಲ ಬಡಾವಣೆಗಳನ್ನು ಪಾಲಿಕೆಗೆ ಸೇರಿಸಲಾಗಿದೆ ಎಂದು ಸಂಪುಟ ಸಭೆಯ ನಂತರ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ಪಾಲಿಕೆ ವ್ಯಾಪ್ತಿಯು ಸದ್ಯ 800 ಚ.ಕಿ.ಮೀ. ವಿಸ್ತೀರ್ಣವಿದ್ದು, ಹೊಸ ಗ್ರಾಮಗಳ ಸೇರ್ಪಡೆಯಿಂದ ಮತ್ತಷ್ಟು ಹಿಗ್ಗಲಿದೆ. ಬಿಬಿಎಂಪಿ ಒಡಲು ಸೇರಲಿರುವ ಈ ಗ್ರಾಮಗಳು ಸಂಪೂರ್ಣವಾಗಿ ನಗರೀಕರಣಗೊಂಡಿವೆ. ಜತೆಗೆ ಪಾಲಿಕೆಯ ವಾರ್ಡ್‌ಗಳ ಮಗ್ಗುಲಲ್ಲೇ ಇವೆ. ಹೀಗಾಗಿ, ಪಾಲಿಕೆಗೆ ಸೇರ್ಪಡೆ ಮಾಡಬೇಕೆಂದು ಇಲ್ಲಿನ ನಿವಾಸಿಗಳು ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದರು. ಇದೀಗ ಸರಕಾರ ಒಪ್ಪಿಗೆ ನೀಡಿದೆ. ಐದು ಗ್ರಾಮಗಳು ಪಾಲಿಕೆಗೆ ಸೇರುತ್ತಿರುವ ಹಿನ್ನೆಲೆಯಲ್ಲಿ ಮುಂಬರುವ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ನಡೆಸದಿರಲು ರಾಜ್ಯ ಚುನಾವಣಾ ಆಯೋಗವನ್ನು ಕೋರಲಾಗಿದೆ.

ರಾಜ್ಯ ಸರಕಾರವು ಈಗಾಗಲೇ ಬಿಬಿಎಂಪಿಗೆ ಹೊಸ ಕಾಯಿದೆ ರೂಪಿಸಿ, ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ. ಈ ಸಂಬಂಧ ಅಧಿಸೂಚನೆ ಕೂಡ ಹೊರಡಿಸಲಾಗಿದೆ. ಈಗ ಹೊಸ ಪ್ರದೇಶಗಳನ್ನು ಪಾಲಿಕೆಗೆ ಸೇರಿಸಲಾಗಿದೆ. ಈ ಗ್ರಾಮಗಳಲ್ಲಿ ಹಲವು ಬಡಾವಣೆಗಳು ತಲೆಯೆತ್ತಿದ್ದು, ಮೂಲಸೌಕರ್ಯ ಸಮಸ್ಯೆಯನ್ನು ಎದುರಿಸುತ್ತಿವೆ. ಅನುದಾನ ಅಲಭ್ಯತೆಯಿಂದ ಗ್ರಾಮ ಪಂಚಾಯಿತಿಗಳು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸಾಧ್ಯವಾಗಿಲ್ಲ.

''ಹೊಸ ಪ್ರದೇಶಗಳನ್ನು ಬಿಬಿಎಂಪಿಗೆ ಸೇರಿಸಿದ ಬಳಿಕವೇ ಚುನಾವಣೆ ನಡೆಸಲಾಗುವುದು. ಆಡಳಿತಾತ್ಮಕವಾಗಿಯೂ ಬಿಬಿಎಂಪಿ ವಲಯಗಳನ್ನು ಹೆಚ್ಚಿಸಲಾಗುತ್ತಿದೆ. ಈ ಬಗ್ಗೆ ಕೋರ್ಟ್‌ಗೂ ಮನವರಿಕೆ ಮಾಡಿಕೊಡಲಾಗುವುದು,'' ಎಂದು ಸಚಿವ ಮಾಧುಸ್ವಾಮಿ ಹೇಳಿದರು.



### ಅನುಕೂಲಗಳೇನು?

- ರಸ್ತೆ, ಒಳಚರಂಡಿಗಳ ಅಭಿವೃದ್ಧಿ
- ಕಾವೇರಿ ಕುಡಿಯುವ ನೀರಿನ ಸಂಪರ್ಕ
- ನಿವೇಶನ ಮೌಲ್ಯ ಹೆಚ್ಚಳ
- ಮನೆ ಮನೆಯಿಂದ ಕಸ ಸಂಗ್ರಹ
- ಸ್ವತ್ತುಗಳಿಗೆ 'ಎ' ಖಾತಾ ಪಡೆಯುವ ಭಾಗ್ಯ
- ಬೀದಿದೀಪಗಳ ಸಮರ್ಪಕ ನಿರ್ವಹಣೆ

### ಮೆಟ್ರೊ ಸಮಿತಿಗೆ ಹೆಚ್ಚುವರಿ ಸದಸ್ಯರು

ಮೆಟ್ರೊ ರೈಲು ಯೋಜನೆಗೆ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 11 ಸದಸ್ಯರ ಸಮಿತಿ ಇದೆ. ಈ ಸಮಿತಿಗೆ ಹೊಸದಾಗಿ ಮೂವರು ಸದಸ್ಯರನ್ನು ನೇಮಿಸಲು ಸಂಪುಟ ಸಭೆ ತೀರ್ಮಾನಿಸಿದೆ. ಆದರಂತೆ, ಬೆಂಗಳೂರು ನಗರ ಪೊಲೀಸ್ ಆಯುಕ್ತರು, ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಕೂಡ ಈ ಸಮಿತಿಯಲ್ಲಿ ಇರಲಿದ್ದಾರೆ.

VK ವಿಜಯ ಕರ್ನಾಟಕ

| Date | 28-11-2020 |
| --- | --- |
| Page No | 9 |


# ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಬೌನ್ಸರ್‌ಗಳ ಗೂಂಡಾಗಿರಿ

**ಬೆಂಗಳೂರು:** ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ಕೇಂದ್ರ ಕಚೇರಿ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಮತ್ತು ಡಾ. ರಾಜ್‌ಕುಮಾರ್ ಪುತ್ಥಳಿ ಅನಾವರಣ ಕಾರ್ಯಕ್ರಮದ ಭದ್ರತೆಗಾಗಿ ನಿಯೋಜಿಸಿದ್ದ ಬೌನ್ಸರ್‌ಗಳು ಪಾಲಿಕೆಯ ನೌಕರನೊಬ್ಬನಿಗೆ ಹಿಗ್ಗಾಮುಗ್ಗ ಥಳಿಸಿರುವ ಘಟನೆ ನಡೆದಿದೆ. ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್, ಆಡಳಿತಾಧಿಕಾರಿ ಅಥವಾ ಆಯುಕ್ತರ ಅನುಮತಿ ಪಡೆಯದೆಯೇ ಪಾಲಿಕೆಯ ಕೇಂದ್ರ ಕಚೇರಿಯ ಪ್ರವೇಶ ದ್ವಾರದಲ್ಲಿ 10-12 ಬೌನ್ಸರ್‌ಗಳನ್ನು ನಿಯೋಜನೆ ಮಾಡಿದ್ದರು. ಇವರು ಪಾಲಿಕೆ ಅಧಿಕಾರಿಗಳು, ನೌಕರರು ಮತ್ತು ಸಾರ್ವಜನಿಕರನ್ನು ಒಳಬಿಡದೆ ಗೂಂಡಾಗಿರಿ ಪ್ರದರ್ಶಿಸಿದರು. ಇದನ್ನು ಪ್ರಶ್ನಿಸಿದ ಪಿಂಚಣಿ ವಿಭಾಗದ 'ಡಿ' ಗ್ರೂಪ್ ನೌಕರ ಚೇತನ್ ಮೇಲೆ ಹಲ್ಲೆ ನಡೆಸಿದರು.

**ನೌಕರನ ಮೇಲೆ ಹಲ್ಲೆ। ಅನುಮತಿ ಪಡೆಯದೆಯೇ ನೇಮಕ**

**ವಿವಾದ ಆರಂಭವಾಗುತ್ತಿದ್ದಂತೆ ಕಾಲ್ಕಿತ್ತ ಬೌನ್ಸರ್**

ಬೌನ್ಸರ್‌ಗಳು ಯಾವುದೇ ವಾಹನಗಳನ್ನೂ ಒಳಬಿಡಲಿಲ್ಲ. ಇದರಿಂದ ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುವಂತಾಯಿತು. ಅಲ್ಲದೆ, ಪಾಲಿಕೆ ಸಿಬ್ಬಂದಿ ಕೂಡ ವಾಹನಗಳ ನಿಲುಗಡೆಗೆ ಪರದಾಡಿದರು. ಪಾಲಿಕೆಯಿಂದಲೇ ಪ್ರವೇಶ ದ್ವಾರದಲ್ಲಿ ಮಾರ್ಷಲ್‌ಗಳು ಮತ್ತು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆದಾಗ್ಯೂ, ಅನುಮತಿ ಪಡೆಯದೆಯೇ ಬೌನ್ಸರ್‌ಗಳನ್ನು ನೇಮಕ ಮಾಡಿದ್ದಕ್ಕೆ ತೀವ್ರ ವಿರೋಧ ವ್ಯಕ್ತವಾಯಿತು. ಈ ವಿಷಯವು ವಿವಾದದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ಬೌನ್ಸರ್‌ಗಳು ಅಲ್ಲಿಂದ ಕಾಲ್ಕಿತ್ತರು.

VK ವಿಜಯ ಕರ್ನಾಟಕ

| Date | 28-11-2020 |
| --- | --- |
| Page No | 9 |

# ನಕ್ಷೆ, ಒಸಿ, ಸಿಸಿ ಮಾಹಿತಿ ಪಾಲಿಕೆ ವೆಬ್‌ಸೈಟ್‌ನಲ್ಲಿ ಲಭ್ಯ

**ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿಯು ಇದೇ ಮೊದಲ ಬಾರಿಗೆ 2019-20 ಮತ್ತು 2020-21ರ ಅವಧಿಯಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿ, ಆರಂಭಿಕ ಪ್ರಮಾಣ ಪತ್ರ (ಸಿಸಿ) ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು (ಒಸಿ) ಸಾರ್ವಜನಿಕರ ವೀಕ್ಷಣೆಗಾಗಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದೆ.

ಪಾಲಿಕೆಯ ನಗರ ಯೋಜನೆ ವಿಭಾಗವು 2019-20 ರಿಂದ ಈವರೆಗೆ 10,311 ನಕ್ಷೆ, 356 ಸಿಸಿ ಹಾಗೂ 329 ಒಸಿ ಗಳನ್ನು ವಿತರಣೆ ಮಾಡಿದೆ. ಈ ಎಲ್ಲ ಪ್ರಮಾಣಪತ್ರಗಳು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಲಭ್ಯ ಇವೆ. ಸಾರ್ವಜನಿಕರು ನಕ್ಷೆ ಮಂಜೂರಾತಿಗಳನ್ನು ಪರಿಶೀಲಿಸಿ ಉಲ್ಲಂಘನೆಯಾಗಿದ್ದರೆ ದೂರು ನೀಡಬಹುದು.

**ಉಲ್ಲಂಘನೆ ಸಂಬಂಧಿಸಿ ದೂರು ನೀಡಲು ಅವಕಾಶ**

ಪಾಲಿಕೆಯಿಂದ ನಕ್ಷೆ ಮಂಜೂರಾತಿ ಪಡೆದವರು ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ನಿರ್ಮಿಸಿದ್ದಾರೆಯೇ ಅಥವಾ ನಿಯಮ ಉಲ್ಲಂಘಿಸಿದ್ದಾರೆಯೇ ಎಂಬುದನ್ನು ಪರಿಶೀಲಿಸಬಹುದಾಗಿದೆ. ಒಂದೊಮ್ಮೆ ನಿಯಮ ಬಾಹಿರವಾಗಿ ಕಟ್ಟಡ ನಿರ್ಮಿಸಿರುವುದು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳು ದೂರು ನೀಡಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ಪಡೆಯಲಾಗಿದೆಯೇ ಎಂಬುದನ್ನೂ ತಿಳಿದುಕೊಳ್ಳಬಹುದಾಗಿದೆ. ಇದರಿಂದ ಅನಧಿಕೃತ ಕಟ್ಟಡಗಳ ನಿರ್ಮಾಣಕ್ಕೆ ಕಡಿವಾಣ ಬೀಳುವ ಸಾಧ್ಯತೆಗಳಿವೆ.

ವಿಜಯ ಕರ್ನಾಟಕ

| Date | 28-11-2020 |
|---|---|
| Page No | 9 |

# ಮಳೆ ಬೆನ್ನಲ್ಲೇ ನಗರದಲ್ಲಿ ಚುಮುಚುಮು ಚಳಿ

**ವಿಕ ಸುದ್ದಿಲೋಕ** ಬೆಂಗಳೂರು

ನಿವಾರ್ ಚಂಡಮಾರುತದ ಪರಿಣಾಮ ನಗರದಲ್ಲಿ ಮಳೆ ಬದಲು ಚಳಿ ಹೆಚ್ಚಿದೆ. ಶುಕ್ರವಾರ ಭಾರಿ ಮಳೆಯಾಗುವುದೆಂಬ ನಿರೀಕ್ಷೆ ಹುಸಿಯಾಗಿದ್ದು, ಜನರು ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ, ಚಳಿ ಹೆಚ್ಚಿದ ಕಾರಣ ಜನರು ಸ್ವೆಟರ್ ತೊಟ್ಟು ದಿನಚರಿಯಲ್ಲಿ ತೊಡಗಿಸಿಕೊಂಡರು.

ಶುಕ್ರವಾರ ಮುಂಜಾನೆ ಕೆಲವೆಡೆ ಇಬ್ಬನಿ ಬಿದ್ದಿದ್ದರೆ, ಇನ್ನೂ ಕೆಲವೆಡೆ ತುಂತುರು ಮಳೆಯಾಗಿದೆ. ಬೆ.10ರ ಬಳಿಕ ಬಿಸಿಲು ಮೂಡಿದರೂ, ಮಧ್ಯಾಹ್ನದ ನಂತರ ಮೋಡದ ವಾತಾವರಣದಿಂದ ಇಡೀ ದಿನ ಜನರಿಗೆ ಚಳಿಯ ಅನುಭವವಾಗಿದೆ. ಇನ್ನೂ 2-3 ದಿನ ಚಳಿ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ನಿವಾರ್ ಚಂಡಮಾರುತದ ಬಳಿಕ ನಗರದಲ್ಲಿ ಉಷ್ಣಾಂಶ ಕಡಿಮೆಯಾಗಿದೆ. ಕನಿಷ್ಠ ಹಾಗೂ ಗರಿಷ್ಠ ತಾಪಮಾನದಲ್ಲೂ ಇಳಿಕೆ ಕಂಡುಬಂದಿದೆ. ನವೆಂಬರ್ ತಿಂಗಳಲ್ಲಿ ಸಾಮಾನ್ಯವಾಗಿ ಸರಾಸರಿ ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆ. ಹಾಗೂ ಗರಿಷ್ಠ 27 ಡಿಗ್ರಿ ಸೆ. ಇರುತ್ತದೆ. 'ನಿವಾರ್'ನಿಂದಾಗಿ ಕನಿಷ್ಠ ಉಷ್ಣಾಂಶ 16.5 ಡಿಗ್ರಿ ಸೆ.ಗೆ ಇಳಿದಿದೆ. ಗರಿಷ್ಠ ಉಷ್ಣಾಂಶದಲ್ಲಿ 6 ಡಿಗ್ರಿಯಷ್ಟು ಇಳಿಕೆಯೊಂದಿಗೆ 18.8 ಡಿಗ್ರಿ ಸೆ.ಗೆ ಕುಗ್ಗಿದೆ.

ಎಚ್‌ಎಎಲ್ ವಿಮಾನನಿಲ್ದಾಣ ವ್ಯಾಪ್ತಿಯಲ್ಲಿ ಉಷ್ಣಾಂಶ ತುಸು ಕಡಿಮೆಯಾಗಿದೆ. ಹಿಂದಿನ ವರ್ಷ ಕೂಡ ಇದೇ ದಿನಗಳಲ್ಲಿ ಇಷ್ಟೇ ಪ್ರಮಾಣದ ಉಷ್ಣಾಂಶ ದಾಖಲಾಗಿತ್ತು. ಕೆರೆ ಹಾಗೂ ಹಸಿರು ಹೆಚ್ಚಿರುವ ಪ್ರದೇಶಗಳಲ್ಲಿ ಚಳಿಯ ಅನುಭವ ಅಧಿಕವಿತ್ತು.

### ಇದು ಥರಗುಟ್ಟುವ ಚಳಿಯಲ್ಲ!

ಹಾಲಿ ನಗರದಲ್ಲಿ ಕಾಣುತ್ತಿರುವ ಚಳಿ ಥರಗುಟ್ಟುವಂತಿಲ್ಲ. ಕೆಲ ವರ್ಷಗಳ ಹಿಂದೆ ನವೆಂಬರ್‌ನಲ್ಲಿ ಕನಿಷ್ಠ ಉಷ್ಣಾಂಶ 13 ಡಿಗ್ರಿ ಸೆ.ಗೆ ಇಳಿಕೆಯಾಗಿತ್ತು. ಅಂತಹ ದಿನಗಳು ಮುಂದಿನ ಡಿಸೆಂಬರ್‌ನಲ್ಲಿ ಬರಲಿದೆ. ನಗರದಲ್ಲಿ ನವೆಂಬರ್ ಮಾಸದಲ್ಲಿ ಅತಿ ಕನಿಷ್ಠ ಉಷ್ಣಾಂಶ(9.6 ಡಿಗ್ರಿ ಸೆ.) 1967ರ ನ.15ರಂದು ದಾಖಲಾಗಿತ್ತು. ಇದುವೇ ನವೆಂಬರ್‌ನ ಸಾರ್ವಕಾಲಿಕ ದಾಖಲೆ ಎನಿಸಿದೆ.

### ನವೆಂಬರ್‌ನಲ್ಲಿ ಕನಿಷ್ಠ ಉಷ್ಣಾಂಶ

| ಸಾಮಾನ್ಯ | ಹಾಲಿ |
|---|---|
| 18 ಡಿಗ್ರಿ ಸೆ. | 16.5 ಡಿಗ್ರಿ ಸೆ. |

VK ವಿಜಯ ಕರ್ನಾಟಕ

| Date | 28-11-2020 |
| --- | --- |
| Page No | 10 |

### 120 ಕೋಟಿ ರೂ. ವೆಚ್ಚ | ಮೈಸೂರು ರಸ್ತೆ, ತುಮಕೂರು ರಸ್ತೆ ಸಂಪರ್ಕ ಸುಲಭ

# ಕಾರ್ಡ್ ರಸ್ತೆ ಶೀಘ್ರ ಸಿಗ್ನಲ್ ಮುಕ್ತ

■ **ವಿಕ ಸುದ್ದಿಲೋಕ** ಬೆಂಗಳೂರು

ಮಹಾಲಕ್ಷ್ಮೀ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ವೆಸ್ಟ್ ಆಫ್ ಕಾರ್ಡ್ ರಸ್ತೆ ಮತ್ತು ಹೊರ ವರ್ತುಲ ರಸ್ತೆ ಸಂಪರ್ಕಿಸುವ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆ ಶೀಘ್ರ ಜಾರಿಗೊಳ್ಳಲಿದೆ.

ಸುಮಾರು 120 ಕೋಟಿ ರೂ. ವೆಚ್ಚದ 2.9 ಕಿ.ಮೀ ಉದ್ದದ ಈ ಯೋಜನೆಯು, ವಿವಿಧ ಜಂಕ್ಷನ್‌ಗಳಲ್ಲಿ ನಾಲ್ಕು ಗ್ರೇಡ್ ಸೆಪರೇಟರ್‌ಗಳನ್ನು ಒಳಗೊಂಡಿದೆ. ಅಲ್ಲದೇ ಈ ಯೋಜನೆ ಅಡಿಯಲ್ಲಿ ವಾಹನಗಳ ಸುಗಮ ಸಂಚಾರಕ್ಕಾಗಿ ವೃಷಭಾವತಿ ಕಣಿವೆಯ ಪೈಪ್ ಲೈನ್ ರಸ್ತೆಯಲ್ಲಿ ಸೇತುವೆ ನಿರ್ಮಾಣಗೊಳ್ಳಲಿದೆ.

**ಪೈಪ್ ಲೈನ್ ರಸ್ತೆಯಲ್ಲಿ ಸೇತುವೆ ನಿರ್ಮಾಣ**

ಬಿಬಿಎಂಪಿಯ ಮೂಲಸೌಕರ್ಯ ವಿಭಾಗವು ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಸದ್ಯ ವಿಸ್ತೃತ ಯೋಜನಾ ವರದಿ(ಡಿಪಿಆರ್) ಸಿದ್ಧಗೊಳ್ಳುತ್ತಿದ್ದು, ಇನ್ನು ಒಂದು ತಿಂಗಳ ಅವಧಿಯಲ್ಲಿ ಟೆಂಡರ್ ಕರೆಯುವ ಸಾಧ್ಯತೆ ಇದೆ. ಈ ಯೋಜನೆಯಿಂದ ವೆಸ್ಟ್ ಆಫ್ ಕಾರ್ಡ್ ರಸ್ತೆಯಿಂದ ಮೈಸೂರು ರಸ್ತೆ ಮತ್ತು ತುಮಕೂರು ರಸ್ತೆ ಕಡೆ ಸಾಗುವ ವಾಹನ ಸವಾರರಿಗೆ ಪ್ರಯಾಣದ ಸಮಯ ಉಳಿತಾಯವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

''ಮೊದಲ ಹಂತದಲ್ಲಿ ಮಳೆನೀರುಗಾಲುವೆಗೆ ಅಡ್ಡವಾಗಿ 800 ಮೀಟರ್ ಸೇತುವೆಯನ್ನು ನಿರ್ಮಿಸಲಾಗುವುದು. ಎರಡನೇ ಹಂತದಲ್ಲಿ, ಹಳೆ ನಂದಿನಿ ಚಿತ್ರಮಂದಿರ ಜಂಕ್ಷನ್ ಕಡೆಗೆ ಮತ್ತು ರಾಜ್ ಕುಮಾರ್ ಪ್ರತಿಮೆ ಕಡೆಗೆ ತೆರಳಲು ಮೇಲ್ಸೇತುವೆ ಹಾಗೂ ಶಾಸ್ತ್ರಿ ಟ್ಯುಟೋರಿಯಲ್ ಸಮೀಪ ಸುರಂಗ ಮಾರ್ಗ ನಿರ್ಮಾಣವಾಗಲಿದೆ,'' ಎಂದು ಬಿಬಿಎಂಪಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ವಾಹನ ದಟ್ಟಣೆ.

''ಈ ಯೋಜನೆಗಾಗಿ ಭೂಸ್ವಾಧೀನ ಮಾಡಿಕೊಳ್ಳುವ ಅಗತ್ಯವಿಲ್ಲ, ಹಾಗಾಗಿ ಶೀಘ್ರ ಯೋಜನೆಯನ್ನು ಪೂರ್ಣಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿ,'' ಎಂದು ಇತ್ತೀಚೆಗೆ ನಡೆದ ವಾರ್ಡ್ ಸಭೆಯಲ್ಲಿ ಸಚಿವ ಕೆ.ಗೋಪಾಲಯ್ಯ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು.

## ಯೋಜನೆ ಅವಧಿ ವಿಸ್ತರಣೆ

ಉದ್ದೇಶಿತ ಗ್ರೇಡ್ ಸೆಪರೇಟರ್‌ಗಳಿಂದ ಎರಡು ಕಿ.ಮೀ ದೂರದಲ್ಲಿ ಪಾಲಿಕೆ ವತಿಯಿಂದ ಮತ್ತೊಂದು ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆಯ ಕಾಮಗಾರಿ ನಿರ್ಮಾಣ ಹಂತದಲ್ಲಿದೆ. 2017ರಲ್ಲಿ ಆರಂಭವಾದ ಯೋಜನೆಯು ಇಲ್ಲಿಯವರೆಗೂ ಕುಂಟುತ್ತಾ ಸಾಗಿದೆ. 2019ರ ಆಗಸ್ಟ್‌ನಲ್ಲಿ ಪೂರ್ಣವಾಗಬೇಕಿದ್ದ ಈ ಯೋಜನೆಯ ಅವಧಿಯನ್ನು ಮೂರು ಬಾರಿ ವಿಸ್ತರಿಸಲಾಗಿದೆ. ''ಶಿವ ನಗರ ಜಂಕ್ಷನ್‌ನಲ್ಲಿ ಮೇಲ್ಸೇತುವೆ ನಿರ್ಮಾಣದ ಶೇ.70ರಷ್ಟು ಕಾಮಗಾರಿ ಪೂರ್ಣಗೊಳಿಸಲಾಗಿದೆ. ರಾಜಾಜಿನಗರ 72ನೇ ಅಡ್ಡ ರಸ್ತೆ ಬಳಿ ಉದ್ದೇಶಿತ ಮೇಲ್ಸೇತುವೆಯೊಂದಿಗೆ ಈ ರಸ್ತೆಯನ್ನು ಸಂಯೋಜಿಸಬೇಕಾದ ಕಾರಣದಿಂದ ಬಸವೇಶ್ವರ ನಗರ ಜಂಕ್ಷನ್ ಮೇಲ್ಸೇತುವೆ ಕಾಮಗಾರಿಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. 2021ರ ಜೂನ್ ವೇಳೆಗೆ ಯೋಜನೆಯು ಪೂರ್ಣಗೊಳ್ಳಲಿದೆ,'' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಜಯ ಕರ್ನಾಟಕ

| Date | 28-11-2020 |
| --- | --- |
| Page No | 10 |

# 808 ಮಂದಿಗೆ ಕೊರೊನಾ

**ಬೆಂಗಳೂರು :** ನಗರದಲ್ಲಿ ಶುಕ್ರವಾರ ಹೊಸದಾಗಿ 808 ಮಂದಿಗೆ ಕೊರೊನಾ ಸೋಂಕು ತಗಲಿರುವುದು ದೃಢಪಟ್ಟಿದೆ. 6 ಮಂದಿ ಸಾವನ್ನಪ್ಪಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಇದುವರೆಗೆ ಸೋಂಕಿತರ ಸಂಖ್ಯೆ 3,67,885ಕ್ಕೆ ಏರಿದೆ. ಈ ಪೈಕಿ 3,44,687 ಮಂದಿ ಚೇತರಿಸಿಕೊಂಡಿದ್ದು, 19,083 ರೋಗಿಗಳು ನಿಗದಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೋವಿಡ್ ಸೋಂಕಿಗೊಳಗಾದವರಲ್ಲಿ 4114 ಮಂದಿ ಮೃತಪಟ್ಟಿದ್ದಾರೆ.

ವಿಜಯ ಕರ್ನಾಟಕ

| Date | 28-11-2020 |
|---|---|
| Page No | 10 |

# ಕೆಸರುಗದ್ದೆಯಂತಾದ ರಸ್ತೆ



ಜಿಪಂ ಸದಸ್ಯ ಮುನಿರಾಜು ಹದಗೆಟ್ಟ ರಸ್ತೆ ಪರಿಶೀಲಿಸಿದರು.

**ಆನೇಕಲ್:** ನಿವಾರ್ ಚಂಡಮಾರುತದ ಪರಿಣಾಮ ಸುರಿದ ಮಳೆಯಿಂದಾಗಿ ಸರ್ಜಾಪುರ ಗ್ರಾಮದ ಹಲವು ರಸ್ತೆಗಳು ಕೆಸರುಗದ್ದೆಯಂತಾಗಿದೆ. ಅರೆಬರೆ ಕಾಮಗಾರಿ ಮತ್ತಷ್ಟು ಸಮಸ್ಯೆ ಸೃಷ್ಟಿಸಿದೆ.

ನಿತ್ಯ ನೂರಾರು ವಾಹನ ಸಂಚರಿಸುವ ಚಿಕ್ಕತಿರುಪತಿ ಸಂಪರ್ಕ ರಸ್ತೆಯಂತೂ ಅಧ್ವಾನದ ಆಗರವಾಗಿದೆ. ರಸ್ತೆ, ಚರಂಡಿಗಾಗಿ ಅಗೆದಿರುವುದರಿಂದ ಅಲ್ಲಲ್ಲಿ ನೀರು ನಿಂತಿದೆ. ಲೋಕೋಪಯೋಗಿ ಇಲಾಖೆ ಮತ್ತು ಆನೇಕಲ್ ಯೋಜನಾ ಪ್ರಾಧಿಕಾರ ಅನುದಾನದಡಿಯಲ್ಲಿ ರಸ್ತೆ ಮತ್ತು ಯುಜಿಡಿ, ಚರಂಡಿ ಕಾಮಗಾರಿ ಪ್ರಗತಿಯಲ್ಲಿದೆ. ಕಾಮಗಾರಿಗೆ ಚಾಲನೆ ನೀಡಿ ಹನ್ನೊಂದು ತಿಂಗಳು ಕಳೆದಿದೆ. ಕಾಮಗಾರಿ ನಿರೀಕ್ಷಿತ ವೇಗದಲ್ಲಿ ಸಾಗದಿರುವುದರಿಂದ ಸಾರ್ವಜನಿಕರು, ವಾಹನ ಸವಾರರು ನಿತ್ಯ ಪರದಾಡುವಂತಾಗಿದೆ.

**ಪರಿಶೀಲನೆ :** ಜಿಪಂ ಸದಸ್ಯ ಮುನಿರಾಜು ತಮಿಳುನಾಡು, ಚಿಕ್ಕತಿರುಪತಿ ಸಂಪರ್ಕ ರಸ್ತೆ ಕಾಮಗಾರಿ ಪರಿಶೀಲಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಕೊರೊನಾ ಕಾರಣದಿಂದ ಕಾಮಗಾರಿ ವಿಳಂಬವಾಗಿದೆ. ಒಂದು ತಿಂಗಳಲ್ಲಿ ಕಾಮಗಾರಿ ಮುಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಜನವರಿ ತಿಂಗಳಿನಲ್ಲಿ ರಸ್ತೆ ಲೋಕಾರ್ಪಣೆಗೊಳಿಸಲಾಗುವುದು,'' ಎಂದರು.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 28-11-2020 |
| --- | --- |
| Page No | 5C |

# ಆನ್‌ಲೈನ್‌ನಲ್ಲಿ ನಕ್ಷೆ, ಒಸಿ, ಸಿಸಿ

**ಬೆಂಗಳೂರು:** ರಾಜಧಾನಿಯಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳು, ನಕ್ಷೆ ಮಂಜೂರಾತಿಗಳಲ್ಲಿ ಪಾರದರ್ಶಕತೆ ತರಲು ಮುಂದಾಗಿರುವ ಬಿಬಿಎಂಪಿ, 2019-20 ಹಾಗೂ 2020-21ರ ಇಲ್ಲಿಯವರೆಗಿನ ಅನೇಕ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ನೀಡಿದೆ. ಬಿಬಿಎಂಪಿ ವತಿಯಿಂದ ನೀಡಲಾಗಿರುವ ಎಲ್ಲ ನಕ್ಷೆ ಮಂಜೂರಾತಿ, ಆರಂಭ ಪ್ರಮಾಣ ಪತ್ರ (ಒಸಿ), ಮುಕ್ತಾಯ ಪ್ರಮಾಣಪತ್ರಗಳನ್ನು (ಸಿಸಿ) ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ಒಟ್ಟು 10,311 ಕಟ್ಟಡ ನಕ್ಷೆ, 356 ಆರಂಭ ಪ್ರಮಾಣ ಪತ್ರ ಹಾಗೂ 329 ಮುಕ್ತಾಯ ಪ್ರಮಾಣಪತ್ರಗಳನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಪಾರದರ್ಶಕತೆ ತರುವ ನಿಟ್ಟಿನಲ್ಲಿ ಈ ಪ್ರಯತ್ನ ನಡೆಸಲಾಗಿದೆ. ಸಾರ್ವಜನಿಕರು ಇವುಗಳ ಉಪಯೋಗ ಪಡೆದುಕೊಳ್ಳಬೇಕೆಂದು ಆಯುಕ್ತ ಮಂಜುನಾಥಪ್ರಸಾದ್ ತಿಳಿಸಿದ್ದಾರೆ.

**» ಎರಡು ವರ್ಷಗಳ ಎಲ್ಲ ದಾಖಲೆ ಅಪ್‌ಲೋಡ್**

ವಿಜಯವಾಣಿ
ಕನ್ನಡಿಗರ ಧ್ವನಿ

| Date | 28-11-2020 |
| --- | --- |
| Page No | 5C |


# 9 ದಿನದಲ್ಲಿ ಕನಿಷ್ಠ ಕರೊನಾ ಸಾವು

**ಬೆಂಗಳೂರು:** ಕರೊನಾ ಸೋಂಕು ಇಳಿಮುಖವಾದ ನಂತರದಲ್ಲಿ ಕಳೆದ 9 ದಿನದಲ್ಲಿ ಒಂದು ದಿನದ ಕನಿಷ್ಠ ಸಂಖ್ಯೆಯ ಸಾವು ರಾಜಧಾನಿ ಬೆಂಗಳೂರಿನಲ್ಲಿ ಶುಕ್ರವಾರ ದಾಖಲಾಗಿದೆ. 6 ಸೋಂಕಿತರು ಮೃತಪಟ್ಟಿದ್ದಾರೆ. ಸಾವಿನ ಪ್ರಕರಣಗಳು ಕಡಿಮೆಯಾಗಿರುವುದು ಸೋಂಕಿನ ತೀವ್ರತೆ ಕಡಿಮೆಯಾಗಿರುವ ಮುನ್ಸೂಚನೆ ನೀಡುತ್ತಿವೆಯಾದರೂ ಚಳಿಗಾಲ ಸೇರಿ ಅನೇಕ ಕಾರಣಗಳಿಂದಾಗಿ ಸೋಂಕು ಏರಿಕೆಯಾಗುವ ಸಾಧ್ಯತೆ ಇದೆ.

» **549 ಸೋಂಕಿತರು ಗುಣಮುಖ**

ಶುಕ್ರವಾರ 549 ಸೋಂಕಿತರು ಗುಣಮುಖರಾಗಿದ್ದಾರೆ. ಈ ಮೂಲಕ ಒಟ್ಟು ಗುಣಮುಖರಾದವರ ಸಂಖ್ಯೆ 3,44,687 ಆಗಿದೆ. 808 ಹೊಸ ಕರೊನಾ ಸೋಂಕಿತರು ಪತ್ತೆಯಾಗಿದ್ದು, ಒಟ್ಟು ಸೋಂಕಿತರ ಸಂಖ್ಯೆ 3,67,885 ಆಗಿದೆ. 19, 083 ಸೋಂಕಿತರು ಆಸ್ಪತ್ರೆಗಳು ಹಾಗೂ ಹೋಂ ಕ್ವಾರಂಟೈನ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿಶ್ವವಾಣಿ

| Date | 28-11-2020 |
| --- | --- |
| Page No | 3 |


### ಹೊರವಲಯದ ಹಳ್ಳಿಗಳ ಸೇರ್ಪಡೆಗೆ ಸಚಿವ ಸಂಪುಟ ತೀರ್ಮಾನ | ಹೈಕೋರ್ಟ್ ತೀರ್ಪಿನ ಮೇಲೆ ಬಿಬಿಎಂಪಿ ಆಕಾಂಕ್ಷಿಗಳ ಕಣ್ಣು

# ಚುನಾವಣೆ ಮುಂದೂಡಿಕೆಗೆ ಗ್ರಾಮ ಸೇರ್ಪಡೆ ಹೈಡ್ರಾಮಾ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಬಿಬಿಎಂಪಿ ವಾರ್ಡ್‌ಗಳ ಮರು ವಿಂಗಡನೆ ಮಾಡಿ ಚುನಾವಣೆ ಮುಂದೂಡುವ ಹುನ್ನಾರದಲ್ಲಿರುವ ಸರಕಾರಕ್ಕೆ ಒಂದೆಡೆ ಹೈಕೋರ್ಟ್ ತೀರ್ಪು ಚುನಾವಣೆ ನಡೆಸುವ ಅನಿವಾರ್ಯತೆ ಸೃಷ್ಟಿಸಿದೆ. ಹೀಗಾಗಿ, ಬಿಬಿಎಂಪಿಗೆ ಮತ್ತಷ್ಟು ಗ್ರಾಮಗಳನ್ನು ಸೇರ್ಪಡೆಗೊಳಿಸುವ ಮೂಲಕ ವಾರ್ಡ್ ಮರು ವಿಂಗಡಣೆ ಮಾಡಿ ಹೈಕೋರ್ಟ್ ಆದೇಶ ಜಾರಿಗೊಳಿಸದಂತೆ ತಡೆಯಲು ತಂತ್ರ ರೂಪಿಸಿದೆ.

ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಬಿಬಿಎಂಪಿಗೆ ಬೆಂಗಳೂರು ಉತ್ತರ ತಾಲೂಕು ಯಶವಂತಪುರ ಹೋಬಳಿಯ ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯತ್‌ಗೆ ಸೇರಿದ ಲಕ್ಷ್ಮೀಪುರ ಕಂದಾಯ ಗ್ರಾಮ, ಕಾನ್ಶಿರಾಂ ನಗರ, ಲಕ್ಷ್ಮೀಪುರದ ಎಲ್ಲಾ ಬಡಾವಣೆಗಳನ್ನು ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದ ಶೆಟ್ಟಿಹಳ್ಳಿ ವಾರ್ಡ್ ನಂ. 12ಕ್ಕೆ ಸೇರ್ಪಡೆ, ಮಲ್ಲಸಂದ್ರ ಹಾಗೂ ಉತ್ತರಹಳ್ಳಿ ಮನವರ್ತೆ ಕಾವಲ್ ಗ್ರಾಮದ ಭಾಗಶಃ ಪ್ರದೇಶಗಳನ್ನು ಬಿಬಿಎಂಪಿಗೆ ಸೇರ್ಪಡೆ ಮಾಡಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ,

ಈ ಮೂಲಕ ಹೈಕೋರ್ಟ್ ಹಾಲಿ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಆದೇಶ ನೀಡಿದರೂ ಹೊಸ ಆದೇಶವನ್ನು ಮುಂದಿಟ್ಟುಕೊಂಡು ಹಾಗೂ ಬಿಬಿಎಂಪಿ ವಾರ್ಡ್‌ಗಳ ಮರು ವಿಂಗಡಣೆ ಮಾಡಲು ಸರಕಾರ ಕಾರ್ಯೋನ್ಮುಖವಾಗಿದೆ. ವಿಧಾನ ಮಂಡಲ ಉಪಸಮಿತಿ ವರದಿ ಆಧಾರದ ಮೇಲೆ ವಾರ್ಡ್ ಮರು ವಿಂಗಡಣೆ ಮಾಡುವ ಕಾರ್ಯಕ್ಕೆ ಚಾಲನೆ ನೀಡಿ ಚುನಾವಣೆ ಮುಂದೂಡುವುದು ಸರಕಾರದ ಮುಂದಿರುವ ಲೆಕ್ಕಾಚಾರವಾಗಿದೆ.

ಬಿಬಿಎಂಪಿ ವ್ಯಾಪ್ತಿಯ ಬಹುತೇಕ ಎಲ್ಲ ಪಕ್ಷದ ಶಾಸಕರಿಗೆ ಶೀಘ್ರವಾಗಿ ಚುನಾವಣೆ ನಡೆಸುವುದು ಬೇಕಿಲ್ಲ, ಈ ಉದ್ದೇಶದಿಂದ ಚುನಾವಣೆ ಮುಂದೂಡಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಸರಕಾರ ತೆಗೆದುಕೊಳ್ಳುತ್ತಿದೆ. ಇದಕ್ಕೆ ಮೂರು ಪಕ್ಷದ ಶಾಸಕರ ಬೆಂಬಲವೂ ಇದೆ. ಇದೇ ಕಾರಣಕ್ಕೆ ಎಸ್.ರಘು ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದ ಸರಕಾರ ವಾರ್ಡ್ ವಿಂಗಡಣೆ ಸಂಬಂಧ ವರದಿ ನೀಡುವಂತೆ ಸೂಚನೆ ನೀಡಿತ್ತು. ಸಮಿತಿ ನೀಡಿದ ವರದಿ ಅನ್ವಯ ವಾರ್ಡ್ ಸಂಖ್ಯೆಯನ್ನು 243ಕ್ಕೇರಿಸಿ, ಅದನ್ನು ಅನುಷ್ಠಾನಗೊಳಿಸಲು ಮತ್ತೊಂದು ಸಮಿತಿ ರಚನೆ ಮಾಡಿದೆ. ಇದೀಗ ಮತ್ತೊಂದು ಸುತ್ತಿನ ನೆಪವನ್ನು ಸೃಷ್ಟಿಸಿದ್ದು, ಕೆಲವು ಹಳ್ಳಿಗಳನ್ನು ಬಿಬಿಎಂಪಿ ವ್ಯಾಪ್ತಿಗೆ ತರುವ ಪ್ರಸ್ತಾವನೆಗೆ ಸಂಪುಟ ಸಭೆಯಲ್ಲಿ ಒಪ್ಪಿಗೆ ಸೂಚಿಸಿದೆ. ಆ ಮೂಲಕ ಚುನಾವಣೆ ಮುಂದೂಡುವುದು ಸರಕಾರದ ಉದ್ದೇಶವಾಗಿದೆ.



- ಎಸ್‌ಟಿಪಿಐ ಸಹಯೋಗದಲ್ಲಿ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ
- ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಅಭಿವೃದ್ಧಿಗೆ 42 ಕೋಟಿ ಅನುದಾನ
- ಬಂಟ್ವಾಳದಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣಕ್ಕೆ 36 ಕೋಟಿ ಅನುದಾನ

**ಹೈಕೋರ್ಟ್ ತೀರ್ಪು ನಿರ್ಣಾಯಕ:** ಬಿಬಿಎಂಪಿ ಚುನಾವಣೆ ನಡೆಸುವ ಸಂಬಂಧ ಹೈಕೋರ್ಟ್ ನೀಡುವ ತೀರ್ಪು ನಿರ್ಣಾಯಕವಾಗಲಿದೆ. ಕಾಂಗ್ರೆಸ್‌ನ ಬಿಬಿಎಂಪಿ ಮಾಜಿ ಸದಸ್ಯ ಎಂ.ಶಿವರಾಜ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಪೀಠ ಚುನಾವಣೆಯನ್ನು ನಿಗದಿತ ಅವಧಿಯಲ್ಲಿ ನಡೆಸದಿರಲು ಕಾರಣ ಕೇಳಿತ್ತು. ಇದಕ್ಕೆ ಚುನಾವಣಾ ಆಯೋಗ ಉತ್ತರಿಸಿ ಚುನಾವಣೆಗೆ ತಾವು ಸಕಲ ಸಿದ್ಧತೆ ಮಾಡಿಕೊಂಡಿದ್ದು ಮತದಾರರ ಪಟ್ಟಿಯನ್ನು ಅಂತಿಮಗೊಳಿಸಿದ್ದೇವೆ. ಸರಕಾರದ ತೀರ್ಮಾನದಂತೆ ವಾರ್ಡ್ ವಿಂಗಡಣೆ ಮಾಡಿದರೆ ಒಂದು ವರ್ಷ ಚುನಾವಣೆ ನಡೆಸುವುದು ಸಾಧ್ಯವಿಲ್ಲ, ಚುನಾವಣೆ ನಡೆಸಲು ಆಯೋಗದಿಂದ ಯಾವುದೇ ವಿಳಂಬವಿಲ್ಲ ಎಂದು ಹೇಳಿತ್ತು. ಆದರೆ, ಸರಕಾರ ವಾರ್ಡ್ ವಿಂಗಡಣೆ ಮಾಡಿದ ನಂತರವೇ ಚುನಾವಣೆ ನಡೆಸಲು ಅವಕಾಶ ನೀಡುವಂತೆ ಕೇಳಿದೆ. ಆದರೆ, ಹೈಕೋರ್ಟ್ ತೀರ್ಪು ಚುನಾವಣೆ ಮುಂದೂಡುವಂತೆ ಸೂಚಿಸುವ ಯಾವುದೇ ಸೂಚನೆ ಇಲ್ಲದ ಕಾರಣಕ್ಕೆ ಸರಕಾರ ಹೊಸ ತಂತ್ರಗಾರಿಕೆಗೆ ಶರಣಾಗಿದೆ.

**ಮೇಲ್ದರ್ಜೆಗೆ ಸ್ಥಳೀಯ ಸಂಸ್ಥೆಗಳು:** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲೂಕಿನ ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯ್ತಿಯನ್ನು ಪಟ್ಟಣ ಪಂಚಾಯಿತಿಯಾಗಿ, ಕೋಲಾರ ಜಿಲ್ಲೆ ವೇಮಗಲ್ ಮತ್ತು ಕುರುಗಲ್ ಗ್ರಾಮ ಪಂಚಾಯಿತಿ, ಶೆಟ್ಟಿ ಹಳ್ಳಿ, ಚೌಡೇನಹಳ್ಳಿ ಗ್ರಾಮಗಳನ್ನು ಒಗ್ಗೂಡಿಸಿ ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿ ಮೇಲ್ದರ್ಜೆಗೆ ಏರಿಸುವ್ರು ದು.ಹೊನ್ನಾಳಿ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೆ ಏರಿಸುವುದು. ಬೆಳಗಾವಿಯ ಹೀರೇನವಾಡಿ ಗ್ರಾಮ ಪಂಚಾಯಿತಿ ಮತ್ತು ಮಚ್ಚೆ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೆ ಏರಿಸುವುದು. ದೇವದುರ್ಗ ತಾಲೂಕಿನ ಜಾಲಹಳ್ಳಿ ಮತ್ತು ಕರಡಿಗುಡ್ಡ ಗ್ರಾಮ ಪಂಚಾಯಿತಿ ಹಾಗೂ ಕೆಲ ವು ಗ್ರಾಮಗಳನ್ನು ಜಾಲಹಳ್ಳಿ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿಸಲು ತೀರ್ಮಾನಿಸಲಾಗಿದೆ.

ಉದಯವಾಣಿ
ಜನಮನದ ಜೀವನಾಡಿ

| Date | 28-11-2020 |
| --- | --- |
| Page No | 2 |

# ಬಿಬಿಎಂಪಿ ಅಧಿಕಾರಿಗೆ ಹಲ್ಲೆ

**ಬೆಂಗಳೂರು:** ಬಿಬಿಎಂಪಿ ಆಯುಕ್ತರ ಕಚೇರಿ ಅಧಿಕಾರಿಯೊಬ್ಬರಿಗೆ ಖಾಸಗಿ ಭದ್ರತಾ ಸಿಬ್ಬಂದಿ ಹಲ್ಲೆ ಮಾಡಿರುವ ಘಟನೆ ಶುಕ್ರವಾರ ಬಿಬಿಎಂಪಿ ಆವರಣದಲ್ಲಿ ನಡೆದಿದೆ. ಪಾಲಿಕೆ ನೌಕರರ ಕನ್ನಡ ಸಂಘದ ವತಿಯಿಂದ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ನಟ ಡಾ.ರಾಜ್ ಪುತ್ಥಳಿ ಅನಾವರಣ ವೇಳೆ ಈ ಘಟನೆ ನಡೆದಿದೆ. ಬಿಬಿಎಂಪಿ ದ್ವಾರದಲ್ಲಿ ಮಾರ್ಷಲ್‌ಗಳು, ಬಿಬಿಎಂಪಿ ಭದ್ರತಾ ಸಿಬ್ಬಂದಿ ಇದ್ದರೂ ನೌಕರರ ಸಂಘ ಅನುಮತಿ ಪಡೆಯದೆ ಭದ್ರತೆ ಎಂದು ಖಾಸಗಿ ಭದ್ರತಾ ಸಿಬ್ಬಂದಿ ನೇಮಿಸಿಕೊಂಡಿತ್ತು. ಈ ಖಾಸಗಿ ಭದ್ರತಾ ಸಿಬ್ಬಂದಿ ಪಾಲಿಕೆ ಸಿಬ್ಬಂದಿಗಳ ವಾಹನಗಳನ್ನು ಒಳಗಡೆ ಬಿಡದೆ ಅಧಿಕಾರಿಯೊಬ್ಬರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಕುರಿತು ಶನಿವಾರ ಭದ್ರತಾ ಸಿಬ್ಬಂದಿ ವಿಚಾರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ಜೆ.ಮಂಜುನಾಥ ತಿಳಿಸಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

| Date | 28-11-2020 |
|---|---|
| Page No | 2 |

# ತಂತ್ರಾಂಶಕ್ಕೆ ದಾಖಲೆ ಸೇರಿಸಿದ ಪಾಲಿಕೆ

**ಬೆಂಗಳೂರು:** ಸ್ವಾಧೀನಾನುಭವ ಪತ್ರ ಸೇರಿದಂತೆ ಆಸ್ತಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಬಿಬಿಎಂಪಿ ತನ್ನ ವೆಬ್‌ಸೈಟ್‌ಗೆ ಸೇರಿಸಿದ್ದು, 2019-20 ಮತ್ತು 2020-21 ಸಾಲಿನ ಎಲ್ಲಾ ದಾಖಲೆಗಳನ್ನು ನಾಗರಿಕರು ಇಲ್ಲಿ ನೋಡಬಹುದಾಗಿದೆ.

ಇ-ಆಸ್ತಿ ತಂತ್ರಾಂಶವನ್ನು ಪಾಲಿಕೆ ಅಭಿವೃದ್ಧಿಪಡಿಸಿದ್ದು, ಇದರಲ್ಲಿ ಆಸ್ತಿ ಖಾತಾ ನೋಂದಣಿ, ವರ್ಗಾವಣೆ ಮತ್ತು ವಿಭಜನೆ ಸೇರಿ ಹಲವು ಸೇವೆಗಳನ್ನು ಮನೆಯಲ್ಲಿಯೇ ಕುಳಿತು ತ್ವರಿತವಾಗಿ ಮತ್ತು ಸುಲಭವಾಗಿ ಸಾರ್ವಜನಿಕರು



ಪಡೆಯಬಹುದಾಗಿದೆ. ಬಿಬಿಎಂಪಿ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿನ 100 ವಾರ್ಡ್‌ಗಳಲ್ಲಿ ಪ್ರಾರಂಭಿಕವಾಗಿ ಈ ಇ-ಆಸ್ತಿ ತಂತ್ರಾಂಶ ವ್ಯವಸ್ಥೆ ಜಾರಿಗೆ ತರಲಾಗಿದೆ. ಉಳಿದ ವಾರ್ಡ್‌ಗಳಲ್ಲಿ ಮುಂದಿನ 6 ತಿಂಗಳಲ್ಲಿ ಈ ವ್ಯವಸ್ಥೆ ಅಳವಡಿಸಲಾಗುತ್ತದೆ.

ನಾಗರಿಕರ ಆಸ್ತಿ ನಿರ್ವಹಣೆಗೆ ಸಂಬಂಧಿಸಿದಂತೆ ಈ ತಂತ್ರಾಂಶ ಬಳಸಿಕೊಳ್ಳಬಹುದು. ಲೋಪ-ದೋಷ ಕಂಡು ಬಂದರೆ, ಪ್ರತಿಕ್ರಿಯೆ ದಾಖಲಿಸಬಹುದು. ಖಾತಾ ಪಡೆಯುವ, ಕಟ್ಟಡದ ನಕ್ಷೆ ಮಂಜೂರಾತಿ, ಉದ್ದಿಮೆ ಪರವಾನಗಿ ಸೇರಿ ಇನ್ನಿತರೆ ಸಾರ್ವಜನಿಕರಿಗೆ ಅನುಕೂಲವಾಗುವ ಅಂಶಗಳಿವೆ ಎಂದು ಬಿಬಿಎಂಪಿ ತಿಳಿಸಿದೆ. ವೆಬ್‌ಸೈಟ್ ವಿಳಾಸ: https://bbmp.gov.in/townplanning.html

ಉದಯವಾಣಿ
ಜನಮನದ ಜೀವನಾಡಿ

| | |
|---|---|
| Date | 28-11-2020 |
| Page No | 3 |

ದಂಡನೂ ಬೇಡ ಸೋಂಕೂ ಬೇಡ...

# ಮಾಸ್ಕ್ ಧರಿಸೋಣ

ನಿನ್ನೆಯ

# ದಂಡಯಾತ್ರೆ

## 27.11.2020 ಶುಕ್ರವಾರ

| ಮಾಸ್ಕ್ ಧರಿಸದ ಪ್ರಕರಣ | ದಂಡ ಸಂಗ್ರಹ |
|---|---|
| 1684 | 4.21 ಲಕ್ಷ ರೂ. |

**35** ಸಾಮಾಜಿಕ ಅಂತರ ಕಾಪಾಡದ ಪ್ರಕರಣ

**8750** ರೂ. ದಂಡ ಸಂಗ್ರಹ

ಉದಯವಾಣಿ
ಜನಮನದ ಜೀವನಾಡಿ

| Date | 28-11-2020 |
| --- | --- |
| Page No | 4 |

# ಗುಂಡಿ ಬಿದ್ದ ರಸ್ತೇಲಿ ಸಂಚರಿಸೋದೇಗೆ?

## ಬೇಗಿಹಳ್ಳಿ ಬಳಿಯ ರಸ್ತೆ ದುಸ್ಥಿತಿ ■ 2 ಕಿ.ಮೀ.ಸಾಗಲು ಬೇಕು 20 ನಿಮಿಷ

• ಮಂಜುನಾಥ ಎನ್.ಬನ್ನೇರುಘಟ್ಟ

**ಆನೇಕಲ್:** ತಾಲೂಕಿನ ಬನ್ನೇರುಘಟ್ಟ-ಆನೇಕಲ್ ಮುಖ್ಯರಸ್ತೆ ಸದ್ಯ ಗುಂಡಿಗಳ ನಡುವೆ ರಸ್ತೆ ಇದೆ ಎಂಬಂತೆ ಕಾಣುತ್ತಿದೆ. ಬೆಳಗಿನಿಂದ ಸಂಜೆವರೆಗೂ ಧೂಳು, ವಾಹನ ದಟ್ಟಣೆಯಿಂದ ಸವಾರರಿಗೆ ಹಿಂಸೆ ಒಂದೆಡೆಯಾದರೆ, ಮಳೆ ಬಂದಾಗ ಕೆರೆಯಂತಾಗುತ್ತದೆ. ಇದರಿಂದಾಗಿ ಪ್ರತಿ ದಿನ ವಾಹನ ಸವಾರರು, ಜನಪ್ರತಿನಿಧಿಗಳು, ಅಧಿಕಾರಿಗಳ ವಿರುದ್ಧ ಕಿಡಿಕಾರುತ್ತಿದ್ದಾರೆ.

**ಕಾಮಗಾರಿ ತಟಸ್ಥ:** ಕಳೆದ 6-7 ತಿಂಗಳಿನಿಂದ ಬನ್ನೇರುಘಟ್ಟದ ರಾಗೀಹಳ್ಳಿ ಗೇಟ್‌ನಿಂದ ಜಿಗಣಿವರೆಗೆ ರಸ್ತೆ ಕಾಮಗಾರಿ ಆರಂಭವಾಗಿತ್ತು. ಲಾಕ್‌ಡೌನ್‌ನಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ಲಾಕ್‌ಡೌನ್ ತೆರವು ಬಳಿಕ ಎಲ್ಲೆಡೆ ಕಾಮಗಾರಿ ಸಾಗುತ್ತಿದೆಯಾದರೂ ಇಲ್ಲಿ ಮಾತ್ರ ಕಾಮಗಾರಿ ತಟಸ್ಥವಾಗಿದೆ.

ಇದರಿಂದ ಜಿಗಣಿ ಕೈಗಾರಿಕಾ ಪ್ರದೇಶಕ್ಕೆ ಹೋಗುವ ವಾಹನ ಸವಾರರು, ಕಾರ್ಮಿಕರು, ಆನೇಕಲ್ ಕಡೆಗೆ ಹೋಗುವ ನಾಗರಿಕರು ಬೇಗಿಹಳ್ಳಿ ಬಳಿಯ ರಸ್ತೆ ದುಸ್ಥಿತಿಯಿಂದ ಹಿಂಸೆ ಪಡುತ್ತಿದ್ದಾರೆ.



ಆನೇಕಲ್ ತಾಲೂಕಿನ ಬನ್ನೇರುಘಟ್ಟ -ಆನೇಕಲ್ ರಸ್ತೆ ಯ ಬೇಗಿಹಳ್ಳಿ ಬಳಿ ರಸ್ತೆ ಹದಗೆಟ್ಟಿರುವುದು.

**ನಾಗರಿಕರ ಟೀಕೆ:** ಬೆಳಗ್ಗೆ 8 ರಿಂದ 11 ಗಂಟೆ ವರೆಗೂ ಸಂಜೆ 5ರಿಂದ 7 ಗಂಟೆವರೆಗೂ ಫುಲ್‌ಟ್ರಾಫಿಕ್ ಜಾಮ್. ಕೇವಲ 2 ಕಿ.ಮೀ. ಸಾಗಬೇಕಾದರೆ 20 ನಿಮಿಷ ಬೇಕು. ಅಪ್ಪಿತಪ್ಪಿ ಗುಂಡಿಯಲ್ಲಿ ವಾಹನ ನಿಂತರೆ ಒಂದು ಗಂಟೆಯಾದರೂ ರಸ್ತೆ ಸಂಚಾರ ಸುಗಮವಾಗುವುದಿಲ್ಲ. ಇನ್ನೂ ರಸ್ತೆ ಕಾಮಗಾರಿಯನ್ನು ಕೆಎಲ್‌ಆರ್‌ಡಿಸಿ (ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ) ವತಿಯಿಂದ ಮಾಡಲಾಗುತ್ತಿದ್ದು ಕೂಡಲೇ ಕ್ರಮ ವಹಿಸಲು ಸ್ಥಳೀಯರು ಮನವಿ ಮಾಡಿದ್ದಾರೆ.

> ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಈ ಭಾಗದ ಶಾಸಕ ಎಂ.ಕೃಷ್ಣಪ್ಪ ಅವರು ನಿರ್ಲಕ್ಷ್ಯ ಮಾಡದೆ ರಸ್ತೆ ಅಭಿವೃದ್ಧಿಗೆ ಒತ್ತು ನೀಡಬೇಕು. ಜಿಗಣಿ ಕೈಗಾರಿಕಾ ಪ್ರದೇಶವಾಗಿರುವುದರಿಂದ ಸಂಚಾರ ದಟ್ಟಣೆ ಇರುತ್ತದೆ. ನಮ್ಮ ಕಷ್ಟ ಹೇಳುವುದು ಯಾರಿಗೆ?
>
> • ಉಮೇಶ್, ವಾಹನ ಸವಾರ

> ಬನ್ನೇರುಘಟ್ಟ-ಹಾರಗದ್ದೆ ರಸ್ತೆ ಅಗಲೀಕರಣ ಮಾಡಿ ಡಬಲ್ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಮಳೆಗಾಲದಲ್ಲಿ ಗುಂಡಿ ಮುಚ್ಚಲು ಅಧಿಕಾರಿಗಳಿಗೆ ಸೂಚನೆ ನೀಡಿ ಬೇಗ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗುವುದು.
>
> • ಎಂ.ಕೃಷ್ಣಪ್ಪ, ಶಾಸಕ, ಬೆಂಗಳೂರು ದಕ್ಷಿಣ ಕ್ಷೇತ್ರ

> ಬನ್ನೇರುಘಟ್ಟದಿಂದ ಆನೇಕಲ್‌ವರೆಗೂ ರಸ್ತೆ ಅಗಲೀಕರಣ ಮಾಡಲು 30 ತಿಂಗಳ ಅವಧಿಯಲ್ಲಿ ಕೆಲಸ ಪೂರ್ಣಗೊಳಿಸಲು ಸಮಯವಿದೆ. ಮಳೆ ಇರುವ ಕಾರಣ ಕೆಲಸ ತಡವಾಗುತ್ತಿದೆ.
>
> • ರಮೇಶ್, ಕಾರ್ಯನಿರ್ವಾಹಕ ಅಧಿಕಾರಿ, ಕೆಎಲ್‌ಆರ್‌ಡಿಸಿ

ಉದಯವಾಣಿ
ಜನಮನದ ಜೀವನಾಡಿ

| Date | 28-11-2020 |
| --- | --- |
| Page No | 4 |

# ಬಿಬಿಎಂಪಿ ಕಚೇರಿ ಆವರಣದಲ್ಲಿ ಡಾ.ರಾಜ್ ಕುಮಾರ್ ಪುತ್ಥಳಿ

**ಬೆಂಗಳೂರು:** ಮುಗ್ಧ ವ್ಯಕ್ತಿತ್ವದ ವ್ಯಕ್ತಿ ಯಾವ ರೀತಿ ಯಶಸ್ವಿಯಾಗಬಹುದು ಎಂಬುದನ್ನು ಮೇಯರ್ ಮುತ್ತಣ್ಣ ಸಿನಿಮಾ ಮೂಲಕ ತಿಳಿಯಬಹುದು ಎಂದು ನಟ ಶಿವರಾಜಕುಮಾರ್ ತಿಳಿಸಿದರು. ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ಬಿಬಿಎಂಪಿ ಕೇಂದ್ರ ಕಚೇರಿ ಅವರಣದಲ್ಲಿ ಸ್ಥಾಪಿಸಿರುವ ನಟ ಡಾ.ರಾಜ್ ಕುಮಾರ್ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದರು.

ಜೀವನದಲ್ಲಿ ಏನೂ ಗೊತ್ತಿಲ್ಲದ ವ್ಯಕ್ತಿ ಯಾವ ರೀತಿ ಯಶಸ್ವಿಯಾಗಬಹುದು ಎಂಬುವುದನ್ನು ಮೇಯರ್ ಮುತ್ತಣ್ಣ ಸಿನಿಮಾದಲ್ಲಿ ತೋರಿಸಿಕೊಟ್ಟಿದ್ದಾರೆ. ಅಪ್ಪಾಜಿ ಅವರು ನಟಿಸಿರುವ ಎಲ್ಲಾ ಚಲನಚಿತ್ರಗಳು ಇಂದಿನ ಯುವಕರಿಗೆ ಆದರ್ಶವಾಗಿದೆ ಎಂದರು.

ಬಿಬಿಎಂಪಿ ಆಯುಕ್ತ ಮಂಜನಾಥ್ ಪ್ರಸಾದ್ ಮಾತನಾಡಿ, ಕನ್ನಡ ಹಬ್ಬದಲ್ಲಿ ಡಾ.ರಾಜ್‌ಕುಮಾರ್ ಹೆಸರು ಕೇಳಿದರೆ ಸಾಕು ಉತ್ಸಾಹ ಬರುತ್ತದೆ. ಡಾ.ರಾಜ್ ಕುಮಾರ್ ಅವರ ಸರಳತೆ ಹಾಗೂ ಆದರ್ಶ ಗುಣಗಳನ್ನು ಬಿಬಿಎಂಪಿ ನೌಕರರು ಅಳವಡಿಸಿಕೊಂಡು ಜೀವನದಲ್ಲಿ ಮುಂದೆ ಬರಬೇಕು ಎಂದರು. ದಕ್ಷಿಣ ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್. ಆರ್.ರಮೇಶ್ ಮಾತನಾಡಿ, 50 ವರ್ಷಗಳ ಹಿಂದೆ ಮೇಯರ್ ಮುತ್ತಣ್ಣ ಚಲನಚಿತ್ರ ಚಿತ್ರೀಕರಣವಾದ ಸ್ಥಳದಲ್ಲಿ ಡಾ.ರಾಜ್ ಕುಮಾರ್ ಅವರ ಪ್ರತಿಮೆ ಅನಾವರಣವಾಗಿದೆ ಎಂದರು.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರು ಹಾಗೂ ಬಿಬಿಎಂಪಿ ನೌಕರರನ್ನು ಗೌರವಿಸಲಾಯಿತು.

ಈ ವೇಳೆ ನಿರ್ಮಾಪಕ ಎಸ್.ಎ.ಗೋವಿಂದರಾಜ್, ಮಾಜಿ ಮೇಯರ್ ಗೌತಮ್ ಕುಮಾರ್, ಸಂಘದ ಗೌರವಾಧ್ಯಕ್ಷ ಜೆ.ಹುಚ್ಚಪ್ಪ, ಅಧ್ಯಕ್ಷ ಸಂಗೊಳ್ಳಿ ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಅಮೃತ್ ರಾಜ್ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ

| Date | 28-11-2020 |
|---|---|
| Page No | 2 |


# 10 ಸಾವಿರ ನಕ್ಷೆ ಮಂಜೂರು

**ಸಂ.ಕ.ಸಮಾಚಾರ ಬೆಂಗಳೂರು**

ಕಳೆದ ಎರಡು ವರ್ಷ ಬಿಬಿಎಂಪಿ ವ್ಯಾಪ್ತಿಯಲ್ಲಿ 10,311 ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಕ್ಷೆ ಮಂಜೂರಾತಿ ನೀಡಲಾಗಿದೆ.

ಈ ಕುರಿತು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಮಾಹಿತಿ ನೀಡಿದ್ದು ಇದುವರೆಗೆ 356 ಕಟ್ಟಡ ನಿರ್ಮಾಣ ಆರಂಭಿಸುವ ಅನುಮತಿ (ಸಿಸಿ) ಹಾಗೂ 329 ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರ (ಒಸಿ) ನೀಡಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಕ್ಷೆ ಮಂಜೂರಾತಿ, ಕಟ್ಟಡ ನಿರ್ಮಾಣ ಆರಂಭಿಸುವ ಅನುಮತಿ (ಸಿಸಿ) ಹಾಗೂ ಕಟ್ಟಡ ಸ್ವಾಧೀನಾನುಭವ ಪತ್ರ (ಒಸಿ) ನೀಡುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಮಾಡಲಾಗಿದೆ. ಸಾರ್ವಜನಿಕರು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ಅನುಮತಿಗಾಗಿ ಬಿಬಿಎಂಪಿ ಕಚೇರಿಗಳಿಗೆ ಅಲೆದಾಡ ಬೇಕಾಗಿಲ್ಲ. ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಹಾಗೂ ಶುಲ್ಕವನ್ನು ಆನ್‌ಲೈನ್‌ನಲ್ಲೇ ಸಲ್ಲಿಕೆ ಮಾಡಿದರೆ ಅನುಮತಿ ದೊರೆಯಲಿದೆ ಎಂದು ತಿಳಿಸಿದ್ದಾರೆ.



- ಪಾಲಿಕೆ ಕಚೇರಿಗೆ ಅಲೆದಾಡ ಬೇಕಾಗಿಲ್ಲ
- ಆನ್‌ಲೈನ್‌ನಲ್ಲೇ ಅರ್ಜಿ–ಶುಲ್ಕ ಸಲ್ಲಿಸಿ
- ಕಟ್ಟಡ ನಿರ್ಮಾಣ ಕಾರ್ಯ ಆರಂಭಿಸಿ

ಅರ್ಜಿ ಸಲ್ಲಿಕೆ ಮಾಡಿದ ಬಳಿಕ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಅಲ್ಲಿಯವರೆಗೆ ಸಾರ್ವಜನಿಕರು ಕಾಯಬೇಕಾಗಿಲ್ಲ. ಅರ್ಜಿ ಸಲ್ಲಿಕೆ ಮಾಡಿ ಕಟ್ಟಡ ನಿರ್ಮಾಣ ಕಾರ್ಯ ಆರಂಭಿಸಬಹುದಾಗಿದೆ ಎಂದು ಪಾಲಿಕೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಂಯುಕ್ತ ಕರ್ನಾಟಕ

| Date | 28-11-2020 |
| --- | --- |
| Page No | 2 |


# 927 ಮಂದಿಗೆ ಸೋಂಕು

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಕಳೆದ 24 ಗಂಟೆಗಳಲ್ಲಿ 927 ಮಂದಿಗೆ ಸೋಂಕು ದೃಢಪಟ್ಟಿದ್ದು ಇದರೊಂದಿಗೆ ಸೋಂಕಿತರ ಸಂಖ್ಯೆ 3,67,885ಕ್ಕೆ ಏರಿಕೆಯಾಗಿದೆ. ಶುಕ್ರವಾರ ಸೋಂಕಿಗೆ 6 ಮಂದಿ ಬಲಿಯಾಗಿದ್ದಾರೆ.

ರಾಜ್ಯದಲ್ಲಿ ಶುಕ್ರವಾರ ಹೊಸದಾಗಿ 1526 ಮಂದಿಗೆ ಕೊರೊನಾ ಸೋಂಕು ಪತ್ತೆಯಾಗಿದ್ದು ರಾಜ್ಯದಲ್ಲಿ ಒಟ್ಟಾರೆ ಸೋಂಕಿತರ ಸಂಖ್ಯೆ 8,81,086ಕ್ಕೆ ಏರಿಕೆಯಾದರೆ, 12 ಮಂದಿ ಕೊರೊನಾಗೆ ಬಲಿಯಾಗಿದ್ದು ಸಾವಿನ ಸಂಖ್ಯೆ 11,736ಕ್ಕೆ ಏರಿಕೆ ಆಗಿದೆ. ರಾಜ್ಯದಲ್ಲಿ ಒಟ್ಟಾರೆ ಗುಣಮುಖರ ಸಂಖ್ಯೆ 8,43,950ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆ ತಿಳಿಸಿದೆ.

ಸಂಯುಕ್ತ ಕರ್ನಾಟಕ

| Date | 28-11-2020 |
|---|---|
| Page No | 3 |

# ಪಾಲಿಕೆಗೆ ಮತ್ತಷ್ಟು ಗ್ರಾಮಗಳ ಸೇರ್ಪಡೆ

## ಬಿಬಿಎಂಪಿ ವಲಯಗಳ ಹೆಚ್ಚಳ | ಸೇರಿಸಿದ ಬಳಿಕವೇ ಚುನಾವಣೆ

**ಸಂ.ಕ.ಸಮಾಚಾರ ಬೆಂಗಳೂರು**

243 ವಾರ್ಡ್‌ಗಳನ್ನು ಸೃಷ್ಟಿಸಲು ಹೊರಟಿರುವ ಹಿಂದೆಯೇ ಬಿಬಿಎಂಪಿಗೆ ಮತ್ತಷ್ಟು ಪ್ರದೇಶ ಸೇರ್ಪಡೆ ಮಾಡಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸಿಎಂ ಬಿ.ಎಸ್.ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು ಮಲ್ಲಸಂದ್ರ ಹಾಗೂ ಉತ್ತರಹಳ್ಳಿಯ ಮನವರ್ತೆ ಕಾವಲ್‌ನ ಭಾಗಶಃ ಪ್ರದೇಶವನ್ನು ಬಿಬಿಎಂಪಿಗೆ ಸೇರಿಸಲು ತೀರ್ಮಾನ ಕೈಗೊಳ್ಳಲಾಗಿದೆ.



### ಮೆಟ್ರೋ ಸಮಿತಿಗೆ ಹೆಚ್ಚುವರಿ ಸದಸ್ಯರು

ಮೆಟ್ರೊ ರೈಲು ಯೋಜನೆಗೆ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 11 ಸದಸ್ಯರ ಸಮಿತಿಯಿದೆ. ಈ ಸಮಿತಿಗೆ ಹೊಸದಾಗಿ ಮೂವರು ಸದಸ್ಯರನ್ನು ನೇಮಿಸಲು ಸಂಪುಟ ಸಭೆ ತೀರ್ಮಾನಿಸಿದೆ. ಆದರಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರು, ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಕೂಡ ಈ ಸಮಿತಿಯಲ್ಲಿ ಇರಲಿದ್ದಾರೆ.

ತಲಘಟ್ಟಪುರ ಮತ್ತು ಕಗ್ಗಲಿಪುರ ಗ್ರಾಪಂ ಪ್ರದೇಶವನ್ನು ಬಿಬಿಎಂಪಿಗೆ ಸೇರ್ಪಡೆಗೊಳಿಸಲಾಗುವುದು. ಜತೆಗೆ ಬೆಂಗಳೂರು ಉತ್ತರ ತಾಲೂಕಿನ ಯಶವಂತಪುರ ಹೋಬಳಿಯ ಸೋಮಶೆಟ್ಟಿಹಳ್ಳಿ ಗ್ರಾಪಂಯ ಲಕ್ಷ್ಮೀಪುರ, ಕನ್ಶೀರಾಮ್ ನಗರಗಳು ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಗೊಳ್ಳಲಿವೆ ಎಂದು ಸಂಪುಟ ಸಭೆ ಬಳಿಕ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ಹೊಸ ಪ್ರದೇಶಗಳನ್ನು ಬಿಬಿಎಂಪಿಗೆ ಸೇರಿಸಿದ ಬಳಿಕವೇ ಚುನಾವಣೆ ನಡೆಸಲಾಗುವುದು. ಆಡಳಿತಾತ್ಮಕವಾಗಿಯೂ ಬಿಬಿಎಂಪಿ ವಲಯಗಳನ್ನು ಹೆಚ್ಚಿಸಲಾಗುತ್ತಿದೆ. ಈ ಬಗ್ಗೆ ಕೋರ್ಟ್‌ಗೂ ಮನವರಿಕೆ ಮಾಡಿಕೊಡಲಾಗುವುದು ಎಂದು ಹೇಳಿದರು.

| Date | 28-11-2020 |
|---|---|
| Page No | 12 |

ಹೊಸ ದಿಗಂತ

12

28 Nov 2020

### 198 ವಾರ್ಡ್‌ಗಳ ಹೆಚ್ಚಳಕ್ಕೆ ವಿಧೇಯಕ ಮಂಡಿಸಿದ್ದ ಸರ್ಕಾರ

# ವಾರ್ಡ್‌ಗಳ ವಿಸ್ತರಣೆ ಬಳಿಕ ಚುನಾವಣೆಗೆ ಸರ್ಕಾರ ಚಿಂತನೆ

**ಬೆಂಗಳೂರು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳನ್ನು ಹಿಗ್ಗಿಸಿದ ನಂತರವೇ ಚುನಾವಣೆಗೆ ಹೋಗಲು ರಾಜ್ಯ ಸರ್ಕಾರ ಚಿಂತನೆ ನಡೆಸಿದಂತಿದೆ.

ಒಂದೆಡೆ ಬಿಬಿಎಂಪಿ ವ್ಯಾಪ್ತಿಯಲ್ಲಿರುವ 198 ವಾರ್ಡ್‌ಗಳನ್ನು ಹೆಚ್ಚಳ ಮಾಡುವುದಕ್ಕಾಗಿ ವಿಧಾನಸಭೆಯಲ್ಲಿ ವಿಧೇಯಕ ಮಂಡಿಸಿದ್ದ ಸರ್ಕಾರ, ಅದರ ಪರಿಶೀಲನೆಗಾಗಿ ಜಂಟಿ ಆಯ್ಕೆ ಸಮಿತಿಯನ್ನು ಸಹ ರಚಿಸಿದೆ. ಇನ್ನೊಂದೆಡೆ ಹೈಕೋರ್ಟ್‌ನಲ್ಲಿ ಕೂಡ ಈ ಬಗ್ಗೆ ವಿಚಾರಣೆಯೂ ನಡೆಯುತ್ತಿದೆ.

ಇದೆಲ್ಲದರ ಮಧ್ಯೆ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಲ ಪ್ರದೇಶಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆ ಮಾಡಿಕೊಳ್ಳುವ ಸಂಬಂಧ ನಿರ್ಣಯ ಕೈಗೊಳ್ಳಲಾಗಿದ್ದು, ಜನಸಂಖ್ಯೆಗೆ ತಕ್ಕಂತೆ ವ್ಯಾಪ್ತಿಯನ್ನು ಹಿಗ್ಗಿಸಲೇಬೇಕಿದೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಸ್ಪಷ್ಟನೆ ನೀಡಿದರು.

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದ ಅವರು, ಮಲ್ಲಸಂದ್ರ - ಉತ್ತರಹಳ್ಳಿ ಗ್ರಾಮದ ಭಾಗಶಃ ಹಳ್ಳಿಗಳನ್ನು ಬಿಬಿಎಂಪಿ ವ್ಯಾಪ್ತಿಗೆ ತರಲು ನಿರ್ಧರಿಸಲಾಗಿದೆ. ತಲಘಟ್ಟಪುರ, ಕಗ್ಗಲೀಪುರ ಗ್ರಾಮ ಪಂಚಾಯತಿಯ ಮಲ್ಲಸಂದ್ರ ಗ್ರಾಮವನ್ನು ಈ ಹಿಂದೆ ಮರುವಿಂಗಡಣೆ ಮಾಡಿದಾಗ ಪಂಚಾಯತಿ ವ್ಯಾಪ್ತಿಯಿಂದ ಕೈಬಿಡಲಾಗಿತ್ತು . ಬಿಬಿಎಂಪಿ ವ್ಯಾಪ್ತಿಗೂ ಸೇರಿಸಿರಲಿಲ್ಲ, ಹೀಗಾಗಿ ಇದನ್ನು ಪಾಲಿಗೆ ಪರಿಧಿಗೆ ತರಲಾಗಿದೆ.

ಇನ್ನು ಉತ್ತರ ತಾಲೂಕು ಸೋಮಶೆಟ್ಟಿಹಳ್ಳಿಯ



- ಬಿಬಿಎಂಪಿ ವ್ಯಾಪ್ತಿಗೆ ಮಲ್ಲಸಂದ್ರ ಗ್ರಾಮ
- ಶೆಟ್ಟಿಹಳ್ಳಿ ವಾರ್ಡ್‌ಗೆ ಸೋಮಶೆಟ್ಟಿಹಳ್ಳಿಯ ಲಕ್ಷ್ಮೀಪುರ ಗ್ರಾಮ ಸೇರ್ಪಡೆ
- ಶೀಘ್ರವೇ ಬಿಬಿಎಂಪಿಗೆ ವಾರ್ಡ್‌ಗಳ ಸೇರ್ಪಡೆ, ನಂತರವೇ ಚುನಾವಣೆ

ಲಕ್ಷ್ಮೀಪುರ ಗ್ರಾಮವನ್ನು ದಾಸರಹಳ್ಳಿ ವಿಧಾನಸಭಾ ಕ್ಷೇತ್ರವ್ಯಾಪ್ತಿಯ ಶೆಟ್ಟಿಹಳ್ಳಿ ವಾರ್ಡ್‌ಗೆ ಸೇರ್ಪಡೆ ಮಾಡಲಾಗಿದೆ.

ಇದೆಲ್ಲದರ ಬಗ್ಗೆ ಹೈಕೋರ್ಟ್‌ಗೆ ಸ್ಪಷ್ಟನೆಗಳನ್ನು ಕೊಟ್ಟು ಮನವರಿಕೆ ಮಾಡಿಕೊಡಲಾಗಿದೆ. ಜಂಟಿ ಆಯ್ಕೆ ಸಮಿತಿಯ ಮಧ್ಯಂತರ ವರದಿ ಬರಬೇಕಿದೆ. 200 ಕ್ಕೂ ಹೆಚ್ಚು ವಾರ್ಡ್‌ಗಳನ್ನು ಮಾಡಬೇಕೆಂಬ ನಿರ್ಧಾರದಿಂದ ಸರ್ಕಾರ ಹಿಂದೆ ಸರಿದಿಲ್ಲ, ಚುನಾವಣೆ ಒಳಗಾಗಿ ಇದಕ್ಕೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳನ್ನೂ ಪೂರ್ಣಗೊಳಿಸುವ ವಿಶ್ವಾಸ ನಮಗಿದೆ ಎಂದು ದೃಢವಾಗಿ ಹೇಳಿದರು.

### ಜನವರಿಯಿಂದ ಜನಗಣತಿ ?

ಮಹಾನಗರ ಪಾಲಿಕೆಯೊಂದರ ವ್ಯಾಪ್ತಿಯಲ್ಲಿ ಇರಬೇಕಾದ ನಿಗದಿತ ಜನಸಂಖ್ಯೆ ಮಿತಿಗಿಂತ ಬೆಂಗಳೂರಿನಲ್ಲಿ ಹೆಚ್ಚಿದ್ದು, ಸುತ್ತಮುತ್ತಲ ಪ್ರದೇಶಗಳನ್ನು ಸೇರ್ಪಡೆ ಮಾಡುವುದರಿಂದ ಅಭಿವೃದ್ಧಿಗೆ ಅನುಕೂಲ ಆಗಲಿದೆ. ಹೀಗಾಗಿ ಬೆಂಗಳೂರಿನ ಒಟ್ಟು ಭೂಪ್ರದೇಶ, ಜನಸಂಖ್ಯೆ, ಮೂಲಭೂತ ಸೌಕರ್ಯ, ವ್ಯಾಪ್ತಿಗಳ ಬಗ್ಗೆ ಸಮೀಕ್ಷೆ ನಡೆಸಿ ಅಂದಾಜು ಲೆಕ್ಕ ಇಟ್ಟುಕೊಳ್ಳಲಾಗಿದೆ. ಇದರ ಆಧಾರದ ಮೇಲೆಯೇ ವಾರ್ಡ್ ಮತ್ತು ವಲಯಗಳನ್ನು ಹೆಚ್ಚಿಸಲು ಚಿಂತನೆ ನಡೆಸಿದ್ದು, ಜನವರಿಯಿಂದ ಜನಗಣತಿ ಕೂಡ ನಡೆಯಲಿದೆ ಎಂದು ಸೂಚ್ಯವಾಗಿ ತಿಳಿಸಿದರು.

### ಸಮಿತಿಗೆ ಸೇರ್ಪಡೆ

11 ಜನರಿದ್ದ ಮೆಟ್ರೋ ರೈಲು ಅನುಷ್ಠಾನದ ಸಮಿತಿಗೆ ಮೂವರನ್ನು ಹೆಚ್ಚುವರಿಯಾಗಿ ಸೇರ್ಪಡೆ ಮಾಡಲಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ, ಆರ್ಥಿಕ ಹಾಗೂ ಕಂದಾಯ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಇದ್ದ ಸಮಿತಿಗೆ ಬೆಂಗಳೂರು ನಗರ ಪೊಲೀಸ್ ಆಯುಕ್ತರು, ವಿಭಾಗೀಯ ರೈಲ್ವೆ ವ್ಯವಸ್ಥಾಪಕರು, ಕೆಆರ್‌ಐಡಿಎಲ್ ವ್ಯವಸ್ಥಾಪಕ ನಿರ್ದೇಶಕರನ್ನು ಸೇರಿಸಲಾಗಿದೆ.

ಜಯಕಿರಣ

JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 27-11-2020 |
| --- | --- |
| Page No | 1 |

## ಪಾಲಿಕೆ ಚುನಾವಣೆ ವಿಚಾರದಲ್ಲಿ ಅನಗತ್ಯ ಹಸ್ತಕ್ಷೇಪಕ್ಕಾಗಿ ಸರ್ಕಾರಕ್ಕೆ ಛೀಮಾರಿ!

# ಬಿಬಿಎಂಪಿ ಚುನಾವಣೆಗೆ ಹೈಕೋರ್ಟ್ ನೀಡುತ್ತಾ ಗ್ರೀನ್ ಸಿಗ್ನಲ್?

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅವಧಿ ಮುಗಿದು 3 ತಿಂಗಳಾಯ್ತು. ಮತ್ತೆ 9 ತಿಂಗಳು ಚುನಾವಣೆ ನಡೆಸುವ ಯಾವುದೇ ಪ್ರಸ್ತಾಪವಾಗಲಿ, ಚಿಂತನೆಯಾಗಲಿ ಸರಕಾರದ ಮುಂದಿಲ್ಲವಂತೆ? ಕಾರಣ ವಾರ್ಡ್ ಮರುವಿಂಗಡಣೆ ಕಾಯಿದೆ... ನೆನಪಿರಲಿ ಈ ಮರು ವಿಂಗಡಣೆ ಕೇವಲ ಚುನಾವಣೆ ಮುಂದೂಡುವ ನೆಪ ಅಷ್ಟೇ ಅಂತೆ.

ಚುನಾವಣೆ ಮುಂದೂಡಲಾಗಿದೆ ಎಂಬುವುದು ಸರ್ಕಾರದ ವಾದ. ಇದಕ್ಕೆ ಗರಂ ಆದ ಹೈಕೋರ್ಟ್ ಇಂಥ ಕಾರಣಗಳ ನೆಪವೊಡ್ಡಿ ಪಾಲಿಕೆ



ಚುನಾವಣೆ ಮುಂದೂಡಿದ್ದು ಸರಿಯಲ್ಲ.. ಅದಕ್ಕೊಂದು ಸ್ಪಷ್ಟತೆ ಬೇಕು. ಮರುವಿಂಗಡನಾ ಬದಿಗಿಟ್ಟು ಚುನಾವಣೆ ನಡೆಸಬೇಕೆಂದು ಆದೇಶವನ್ನು ಎತ್ತಿಟ್ಟು ಸರ್ಕಾರಕ್ಕೆ ಚಾಟಿ ಬೀಸಿದೆ.

ಇದರ ಬೆನ್ನಲ್ಲೇ ಚುನಾವಣಾ ಆಯೋಗ ಕೂಡ ಚುನಾವಣೆ ನಡೆಸಲು ಸರ್ವ ಸನ್ನದ್ಧವಾಗಿದ್ದು, ಸರ್ಕಾರ ವಿನಾಕಾರಣ ಮೂಗು ತೂರಿಸುತ್ತಿರುವುದರ ಬಗ್ಗೆ ಬೇಸರ ವ್ಯಕ್ತಪಡಿಸಿದೆ. ಪಾಲಿಕೆ ಚುನಾವಣೆ ನಡೆಸೋದು ಬಿಬಿಎಂಪಿಗೂ ಚುನಾವಣಾ ಆಯೋಗಕ್ಕು ಬಿಟ್ಟ ವಿಚಾರ. ಇದರಲ್ಲಿ ಸರ್ಕಾರ ಅನಗತ್ಯವಾಗಿ ಮೂಗು ತೂರಿಸದಿದ್ದರೆ ತಾನು ನಿಗದಿತ ಅವಧಿಯಲ್ಲೇ ಚುನಾವಣಾ ನೀತಿ ಸಂಹಿತೆ ಘೋಷಿಸಿ ಚುನಾವಣೆ ನಡೆಸಲು ಸರ್ವ ಸನ್ನದ್ಧರಾಗಿ ಕೋರ್ಟ್‌ಗೆ ಮನವರಿಕೆ ಮಾಡಿಕೊಟ್ಟಿದೆ.

ಬೆಂಗ್ಳೂರು ವಿಸ್ತಾರವಾಗಿರುವುದಕ್ಕೂ ಮರುವಿಂಗಡಣೆ ಕೊನೆಂ ಪು ಪುಟಕ್ಕೆ

## ಗ್ರೀನ್ ಸಿಗ್ನಲ್?

ಕಾಯಿದೆ ಜಾರಿಗೊಳಿಸುವುದಕ್ಕೂ ವಾರ್ಡ್‌ಗಳನ್ನ ಹಿಗ್ಗಿಸುವುದಕ್ಕೂ ಚುನಾವಣೆ ನಡೆಸುವುದಕ್ಕೂ ಯಾವುದೇ ಸ್ಪಷ್ಟವಾದ ಕಾರಣವಿಲ್ಲ. ಆದರೆ ಕೆಲ ಕುಂಟುನೆಪಗಳನ್ನಿಟ್ಟುಕೊಂಡು ಸರ್ಕಾರ ಮಾಡುತ್ತಿರುವ ಹುನ್ನಾರವಷ್ಟೆ ಎನ್ನುವುದು ಕೂಡ ಹೈಕೋರ್ಟ್‌ಗೆ ಮನವರಿಕೆಯಾದಂತಿದೆ.

ಹಾಗಾಗಿಯೇ ಈ ವಿಚಾರದಲ್ಲಿ ಮೂಗು ತೂರಿಸಿಕೊಂಡು ಬರೋದನ್ನು ಬಿಟ್ಟು ನಿಗದಿತ ಅವಧಿಯಲ್ಲಿ ಚುನಾವಣೆ ನಡೆಸಿ ಎಂದು ಕೋರ್ಟ್ ಆದೇಶವಿತ್ತರೂ ಆಶ್ಚರ್ಯವಿಲ್ಲ. ಹಾಗಾಗಿ ಈಗ ಸರ್ಕಾರವೂ ಸೇರಿದಂತೆ ಎಲ್ಲರ ಚಿತ್ತ ಹೈಕೋರ್ಟ್ ತೀರ್ಪಿನ ಮೇಲೆ ನೆಟ್ಟಿದೆ.

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 27-11-2020 |
| --- | --- |
| Page No | 1 |

# ಕಸಕ್ಕೊಂದು ಪ್ರತ್ಯೇಕ ಮಂಡಳಿ ನಿಜಕ್ಕೂ ಬೇಕಾ?

ಬೆಂಗಳೂರು: ಎಷ್ಟೇ ತಿಣುಕಾಡಿದರೂ ಹೇಗೆಲ್ಲಾ ಹೆಣಗಾಡಿದರೂ ಅದೆಷ್ಟೇ ರೀತಿಯ ಸರ್ಕಸ್ ಮಾಡಿದರೂ ರಾಜಧಾನಿ ಬೆಂಗಳೂರಿನಲ್ಲಿ ಕಸದ ಸಮಸ್ಯೆಗೆ ಬ್ರೇಕ್ ಹಾಕಲು ಸಾಧ್ಯವೇ ಆಗಿಲ್ಲ. ಇದೆಲ್ಲದಕ್ಕೂ ಕಸವನ್ನು ಮಾಫಿಯಾವನ್ನಾಗಿ ಮಾಡಿಕೊಂಡಿರುವ ದುಷ್ಟಕೂಟವೇ ಕಾರಣ ಎನ್ನುವುದು ಎಲ್ಲರಿಗೂ ಗೊತ್ತು. ಕಸದಿಂದ ಬರುವ ಲಾಭಕ್ಕೆ ಪಕ್ಷಾತೀತವಾಗಿ ಒಂದಾಗುವ ಚುನಾಯಿತರು ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಜೊತೆ ಸೇರಿಕೊಂಡು ಪರ್ಸೆಂಟೇಜ್ ವ್ಯವಹಾರ ಮಾಡಿಕೊಂಡಿರುವುದರಿಂದಲೇ ಜಾಗತಿಕ



ಬೆಂಗಳೂರಿನಲ್ಲಿರುವ ರಾಶಿರಾಶಿ ಕಸ



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಟ್ಟದಲ್ಲಿ ಹೇಗೆಲ್ಲಾ ಬೆಳೆದಿದ್ದರೂ ಬೆಂಗಳೂರಿಗೆ ಗಾರ್ಬೇಜ್ ಸಿಟಿ ಎಂಬ ಕಳಂಕ, ಕುಖ್ಯಾತಿ ತಟ್ಟಿರುವುದು ಕೂಡಾ ಅಷ್ಟೇ ಸತ್ಯ.

ಜಗತ್ತೇ ನಿಬ್ಬೆರಗಾಗಿ ನೋಡುವ ಮಟ್ಟದಲ್ಲಿ ಬೆಳೆದಿರುವ ಬೆಂಗಳೂರಿಗೆ ಕಸದ ಸಮಸ್ಯೆಗೆ ಪರಿಣಾಮಕಾರಿ ಹಾಗೂ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಕಷ್ಟವೇ? ಇಂತಹ ಪ್ರಶ್ನೆಯನ್ನು ನಿರಂತರವಾಗಿ ನಮ್ಮ ಆಡಳಿತ ವ್ಯವಸ್ಥೆ ಮಾಡುತ್ತಾ ಬಂದಿದ್ದರೂ ಅದನ್ನು ಕಾರ್ಯಗತಗೊಳಿಸುವ ಇಚ್ಛಾಶಕ್ತಿ ಹಾಗೂ ಬದ್ಧತೆಯನ್ನು ಈವರೆಗೂ ಪ್ರದರ್ಶಿಸಿಯೇ ಇಲ್ಲ. ಹಾಗಾಗಿಯೇ ಕೊನೆಯ ಪುಟಕ್ಕೆ

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 27-11-2020 |
| --- | --- |
| Page No | 6 |

# ಬೇಕಾ?

ಬಿಬಿಎಂಪಿ ಬಜೆಟ್‌ನ ಶೇಕಡಾ 25ರಷ್ಟು ಪಾಲನ್ನು ಕಸದ ಮಾಫಿಯಾವೇ ನುಂಗಿ ಹಾಕುತ್ತಿದೆ.

ಕಸದ ಸಮಸ್ಯೆ ದಿನೇದಿನೇ ಜನಜೀವನವನ್ನು ತೀಕ್ಷ್ಣವಾಗಿ ಬಾಧಿಸುವುದರ ಜೊತೆಗೆ ನಗರದ ಸೌಂದರ್ಯವನ್ನು ಹಾಳುಮಾಡುವಷ್ಟು ಪರಿಣಾಮಕಾರಿಯಾಗಿರುವುದಕ್ಕೆ ನಮ್ಮ ಚುನಾಯಿತ ವ್ಯವಸ್ಥೆಯೇ ಕಾರಣ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಏಕೆಂದರೆ ಕಸದ ಮಾಫಿಯಾದಿಂದ ಸಿಗುವ ಕಿಕ್‌ಬ್ಯಾಕ್ ಅಥವಾ ಪರ್ಸೆಂಟೇಜ್‌ನಿಂದಲೇ ಅದೆಷ್ಟೋ ಕಾರ್ಪೊರೇಟರ್ಸ್ ಲಕ್ಷಾಂತರ, ಕೋಟ್ಯಂತರ ಆಮದನಿ ಗಿಟ್ಟಿಸುತ್ತಿದ್ದಾರೆನ್ನುವುದು ಗುಟ್ಟಿನ ವಿಷಯವೇನಲ್ಲ. ಕಸದಿಂದ ಇಷ್ಟೊಂದು ಲಾಭ ಅನಾಯಾಸವಾಗಿ ಕುಳಿತುಕೊಂಡಲ್ಲೇ ಬಂದುಬೀಳುತ್ತದೆ ಎಂದರೆ ಯಾರಿಗೆ ತಾನೇ ಆ ಸಮಸ್ಯೆ ಬಗೆಹರಿಯಬೇಕು ಎನಿಸುತ್ತದೆ ಹೇಳಿ? ಬಹುಶಃ ಕಸದ ಸಮಸ್ಯೆ ಉಲ್ಬಣವಾಗೋಕೂ ಕಾರಣ ಇದುವೇ ಆಗಿದೆ.

ಮೊದಲೇ ಹೇಳಿದಂತೆ ಬಿಬಿಎಂಪಿ ಬಜೆಟ್‌ನ ಶೇ.25ರಷ್ಟು ಪಾಲನ್ನು ಕಸವೇ ನುಂಗಿಹಾಕುತ್ತಿದೆ. ಹತ್ತಿರತ್ತಿರ 2ರಿಂದ 2.5 ಸಾವಿರ ಕೋಟಿಯಷ್ಟು ಹಣವನ್ನು ಇವತ್ತು ಬಿಬಿಎಂಪಿ ಕಸದ ವಿಲೇವಾರಿ ಹಾಗೂ ನಿರ್ವಹಣೆಗೆ ಖರ್ಚು ಮಾಡುತ್ತಿದೆ. ದಿನಂಪ್ರತಿ ಉತ್ಪತ್ತಿಯಾಗುವ 3,000 ಮೆಟ್ರಿಕ್ ಟನ್ ಕಸದ ಲೆಕ್ಕವನ್ನು ದೊಡ್ಡದಾಗಿ ಬಿಂಬಿಸಿ ಅದನ್ನು ವಿಲೇವಾರಿ ಮಾಡುವುದಕ್ಕೆ ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದೇವೆ ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದೆ. ಆದರೆ ವಾಸ್ತವ ಏನೆಂಬುದು ಎಲ್ಲರಿಗೂ ಗೊತ್ತು.

ಈ ನಡುವೆ ಹೊಸದೊಂದು ಪ್ರಸ್ತಾವನೆ ಸರ್ಕಾರ ಹಾಗೂ ಬಿಬಿಎಂಪಿ ಮಟ್ಟದಲ್ಲಿ ನಡೆಯುತ್ತಿದೆ ಎನ್ನಲಾಗುತ್ತಿದೆ. ಸಾವಿರಾರು ಕೋಟಿ ಹಣ ಖರ್ಚು ಮಾಡಿದರೂ ಸಮಸ್ಯೆ ಬಗೆಹರಿಯುತ್ತಿಲ್ಲ ಎನ್ನುವ ಕಾರಣ ಮುಂದೊಡ್ಡಿ ಕಸದ ನಿರ್ವಹಣೆಗೆಂದೇ ಪ್ರತ್ಯೇಕ ಮಂಡಳಿ ಹಾಗೂ ಪ್ರಾಧಿಕಾರ ರಚಿಸಿದರೆ ಹೇಗೆ ಎನ್ನುವ ಪ್ಲ್ಯಾನ್ ನಡೆಯುತ್ತಿದೆ ಎನ್ನಲಾಗಿದೆ. ಹಾಗೇನಾದರೂ ಪ್ರತ್ಯೇಕ ಪ್ರಾಧಿಕಾರವಾಗಿದ್ದೇ ಆದಲ್ಲಿ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುತ್ತದೆ ಎಂದೇನಾದರೂ ಆಲೋಚಿಸಿದರೆ ಅದರಷ್ಟು ಶುದ್ಧ ಮೂರ್ಖತನದ ಆಲೋಚನೆ ಮತ್ತೊಂದಿಲ್ಲ ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತ ಅಮರೇಶ್.

ಕಸದ ನಿರ್ವಹಣೆಗೆ ಅಸ್ತಿತ್ವಕ್ಕೆ ತರಲು ಆಲೋಚಿಸುತ್ತಿರುವ ಪ್ರತ್ಯೇಕ ಮಂಡಳಿಯ ಉದ್ದೇಶ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಎಂದು ಹೇಳಲಾಗುತ್ತಿದ್ದರೂ ಅದರಿಂದ ಅದು ಕಾರ್ಯಗತವಾಗುತ್ತದಾ ಎನ್ನುವುದಕ್ಕೆ ಸ್ಪಷ್ಟ ಉತ್ತರವಿಲ್ಲ. ನಗರ ಯೋಜನಾತಜ್ಞರು ಆದಿಯಾಗಿ ಕಸ ಸಂಸ್ಕರಣೆ ವಿಚಾರದಲ್ಲಿ ಸಾಕಷ್ಟು ಕೆಲಸ ಮಾಡುತ್ತಿರುವ ಎನ್‌ಜಿಓಗಳು ಬಿಬಿಎಂಪಿಯ ಈ ಪ್ರತ್ಯೇಕ ಮಂಡಳಿಯ ಆಲೋಚನೆಯನ್ನು ಅವೈಜ್ಞಾನಿಕ ಎನ್ನುತ್ತಿವೆ. ಪ್ರತ್ಯೇಕ ಮಂಡಳಿ ರಚನೆಯಾದರೆ ಈಗ ಕಸದ ನಿರ್ವಹಣೆಗೆ ಖರ್ಚು ಮಾಡುತ್ತಿರುವ ಹಣದ ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆಯೇ ಹೊರತು, ರಾತ್ರೋರಾತ್ರಿ ಕಸದ ಸಮಸ್ಯೆ ಶಾಶ್ವತವಾಗಿ ಬಗೆಹರಿದುಬಿಡುತ್ತದೆ ಎಂಬ ನಿರ್ಧಾರಕ್ಕೆ ಬರಲು ಸಾಧ್ಯವೇ ಇಲ್ಲ.

ಏಕೆಂದರೆ ಅಂತಹುದೊಂದು ಮ್ಯಾಜಿಕ್ ತಂತ್ರ ಯಾರಲ್ಲಿಯೂ ಇರಲು ಸಾಧ್ಯವಿಲ್ಲ ಎನ್ನುತ್ತಾರೆ ನಗರತಜ್ಞ ಹರಿಶೇಖರನ್. ಬಿಬಿಎಂಪಿ ವ್ಯಾಪ್ತಿಯಲ್ಲಿ ಇಂತಹುದೊಂದು ವಿಚಾರ ಪ್ರಸ್ತಾಪವಾಗುತ್ತಿದ್ದರೂ ಯಾವುದೇ ಪಕ್ಷದ ಮಾಜಿ ಕಾರ್ಪೊರೇಟರ್ಸ್ ಧ್ವನಿಯೆತ್ತದಿರುವುದು ಆಶ್ಚರ್ಯ. ಬಿಬಿಎಂಪಿಯಿಂದ ಆಗದ ಕೆಲಸವನ್ನು ಪ್ರತ್ಯೇಕ ಮಂಡಳಿ ರಚನೆಯ ಮೂಲಕ ಮಾಡಲಾಗುತ್ತದೆಯೆಂದರೆ ಅದಕ್ಕಿಂತ ಸಂತೋಷದ ವಿಷಯ ಮತ್ತೊಂದಿದೆಯಾ? ಎಂದು ಸ್ವಾಗತಿಸುವ ಧೋರಣೆ ಅವರ ಈ ಮೌನಕ್ಕೆ ಕಾರಣವೋ ಗೊತ್ತಾಗುತ್ತಿಲ್ಲ.

ಆದರೆ ಒಂದಂತೂ ಸತ್ಯ. ಪ್ರತ್ಯೇಕ ಮಂಡಳಿ ರಚನೆಯಾಗುವುದೇ ನಿಜವಾದರೆ, ಕಸ ವಿಲೇವಾರಿಯಂತಹ ಒಂದು ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಲಿಕ್ಕಾಗದೆ ಸರ್ಕಾರಕ್ಕೆ ಬಿಟ್ಟುಕೊಟ್ಟ ಅಪಖ್ಯಾತಿ ಬಿಬಿಎಂಪಿ ಹಾಗೂ ಅದರ ಚುನಾಯಿತ ವ್ಯವಸ್ಥೆಗೆ ತಟ್ಟುತ್ತದೆ. ಬಿಬಿಎಂಪಿ ಮಟ್ಟದಲ್ಲಿಯೇ ಈ ಜವಾಬ್ದಾರಿಯನ್ನು ಉಳಿಸಿಕೊಳ್ಳುವ ಕೆಲಸ ಆಗಬೇಕು ಎನ್ನುವ ಮಾತುಗಳು ಕೂಡ ಕೇಳಿಬರುತ್ತಿವೆ.

ಆದರೆ ಕಸ ವಿಲೇವಾರಿಯಂತಹ ಸಮಸ್ಯೆ ಹಾಗೂ ಸವಾಲಿನಿಂದಾಗಿ ಬೆಂಗಳೂರಿಗರಿಂದ ಛೀಮಾರಿ ಹಾಕಿಸಿಕೊಳ್ಳುತ್ತಲೇ ಇರುವ ವೈಫಲ್ಯವನ್ನು ಮರೆಮಾಚಲು ಬಿಬಿಎಂಪಿ ಆಡಳಿತ ವ್ಯವಸ್ಥೆ ಈ ತ್ಯಾಜ್ಯ ನಿರ್ವಹಣೆಯ ಪ್ರತ್ಯೇಕ ಮಂಡಳಿ ರಚಿಸಲು ಮುಂದಾಗಿದೆ ಎನ್ನುವುದು ಸಾರ್ವಜನಿಕವಾಗಿ ಕೇಳಿಬರುತ್ತಿದೆ.

| Date | 27-11-2020 |
| --- | --- |
| Page No | 4 |





## ರಸ್ತೆಯ ಅವಸ್ಥೆ

ಕಬ್ಬನ್‌ಪೇಟೆ ಹಾಗೂ ಎಸ್‌ಬಿಎಂ ಸರ್ಕಲ್ ಬಳಿ ರಸ್ತೆಯ ಮೇಲೆ ಮಳೆ ನೀರು ನಿಂತು ವಾಹನ ಸವಾರರು ಪರಿತಪಿಸುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ಕೊಚ್ಚೆಮಯವಾಗಿರುವ ಈ ಪ್ರದೇಶದಲ್ಲಿ ಪಾದಚಾರಿಗಳ ಓಡಾಟಕ್ಕೂ ಕೂಡ ಅಡಚಣೆಯಾಗಿದೆ.